
ಕೊರವಂಜಿ

KORAVANJI
Kannada Monthly



ನವೆಂಬರ್
೧೯೬೫

ಕಿಸಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.

ಕೊರವಂಜಿ

ಸಂಪುಟ ೨೪] ನವೆಂಬರ್ ೧೯೬೫ [ಸಂಚಿಕೆ ೮

ಕು ಹ ಕಿ ಡಿ ಗ ಳು

ಅಯೂಬ್ ರ ಚಿತ್ರವನ್ನು ನೆಯ್ದಿರುವ ರತ್ನಗಂಬಳಿಗಳನ್ನು ಅಜಾದ್ ಕಾಶ್ಮೀರದಲ್ಲಿ ತಯಾರಿಸಿದ್ದಾರಂತೆ,

—ಅಲ್ಲಿನ ಜನ ರತ್ನಗಂಬಳಿಯನ್ನು ಝಾಡಿಸಿ ಝಾಡಿಸಿ ಶುಭ್ರವಾಗಿಟ್ಟಿದ್ದಾರಂತೆ.

* * * *

ದೀಪಾವಳಿಗೆ ಹೊಸಸೀರೆ ಕೊಂಡುಕೊಡಲಿಲ್ಲ ಅಂತ ಹೆಂಡತಿ ಭಾವಿಗೆ ಬಿದ್ದು ಪ್ರಾಣ ಕಳೆದುಕೊಂಡಳಂತೆ,

—ಈಗ ಗಂಡನಿಗೆ ಹೊಸ ಹೆಂಡತಿ ! !

* * * *

ವಿಶ್ವಸಂಸ್ಥೆಯ ಹೊರಬಾಗಿಲ ಬಳಿ " ನಾಯಿಗಳಿವೆ ಎಚ್ಚರಿಕೆ " ಎಂದು ತೂಗು ಹಲಗೆಯನ್ನು ಹಾಕಿದ್ದಾರಂತೆ.

—ಈಗ ಅರ್ಥವಾಯಿತು; ಯಾಕೆ ಅಂತ ? ಒಳಗೆ ಭುಟ್ಟೋ ಭಾಷಣ ! !

* * * *

ಹಾವು ಕಡಿದು ಗಂಡ ಸತ್ತುಹೋದ. ತರುಣಿ ವಿಧವೆಯೊಬ್ಬಳು, ಹಿಂದಿನ ಜನ್ಮದಲ್ಲಿ ತನ್ನ ಪತಿಯಾಗಿದ್ದ ಘಟಸರ್ಪದೊಂದಿಗೆ, ಈಗ ಸಂಸಾರದ ಚಕ್ಕಂದ ನಡೆಸುತ್ತಿದ್ದಾಳಂತೆ:—

—ಓ ಹೋ ! ಈವ್, ಗಾರ್ಡನ್ ಆಫ್ ಈಡನ್-ಸರ್ಪೆಂಟ್ ! !

ಧೂಮಕೇತುವು ಸೂರ್ಯನ ಹತ್ತಿರ ಹಾದು ಹೋದಾಗ ಸೀಳಾಗಿ ಹೋಯಿತಂತೆ.

—ಪಾಕೀಸ್ತಾನದ ಕೋಳಂಗಳು ಬೇಳೆಯಾಗುವುದರ ಸೂಚನೆಯೇ ?

* * * *

ಬಸ್ಸಿಗೆ ಕಾದಿರುವವರಿಗೆ ಇದ್ದಲ್ಲೇ ಕಾಫಿ ಸರಬರಾಜು ಮಾಡುವ ಚೋಟಿ ಹುಡುಗ, ಈಗ ಬಸ್ ಕೊಳ್ಳುವ ಸ್ಥಿತಿಯಲ್ಲಿದ್ದಾನಂತೆ !

* * * *

ಇಂಡೋನೇಷ್ಯಾದಲ್ಲಿ ನಡೆದ ಕ್ರಾಂತಿಯ ಸುದ್ದಿಯನ್ನು ಕೇಳಿ ಶ್ರೀ ನಂಬೂದರಿಪಾದ್ ಅವರು ಕಣ್ಣೀರುಮಿಡಿದರಂತೆ.

* * * *

ಎಂಟು ನೂರು ವರ್ಷಗಳಿಂದ ಹಿಂದೂಗಳಿಗೆ ನಾವು ಸಂಸ್ಕೃತಿಯನ್ನೂ ನಾಗರಿಕತೆಯನ್ನೂ ಕಲಿಸಿದೆವು. ಎಂದು ಭುಟ್ಟೋ ಅವರು ಬೌ ಬೌ ಮಾಡಿದರಂತೆ

—ಉಪನಿಷದ್ಕಾಲದಲ್ಲಿ ಭುಟ್ಟೋ ಅವರ ತಲೆ ತಲಾಂತರದವರು ಮೇಕೆ ಮೇಯಿಸುತ್ತಿದ್ದಿರಬೇಕು !!

* * * *

ಈ ಸಾರ್ತಿ ಮಳೆ ಬರದೆ ಇದ್ದ ಪ್ರಯುಕ್ತ ಒಂದು ಅನುಕೂಲ

—ಬೆಂಗಳೂರಿನ ರಾಜಮಾರ್ಗಗಳಲ್ಲಿ. ಅಂದರೆ ಕಾಡುದಾರಿಗಳಲ್ಲಿ, ಈಗಲೂ ಓಡಾಡಲು ಸಾಧ್ಯ,

* * * *

ಆಹಾರದ ಅಭಾವ ಹೆಚ್ಚಾಯ್ತು ಎಂದು ಪತ್ರಿಕೆಗಳಲ್ಲಿ ಬರುತ್ತಲೇ ಇದೆಯಲ್ಲ ! ಅದರ ಜತೆಗೆ ಹೊಸ ಹೊಸ ಹೋಟಲುಗಳನ್ನು ಹೊಸ ಹೊಸ ಸಚಿವರು ತೆರೆಯುತ್ತಲೇ ಇದ್ದಾರಲ್ಲ-

—ಇದರ ಮರ್ಮ ಏನಿರಬಹುದು ? ಸಚಿವರಿಗೆ ಪಾಲು ಇರಬಹುದೆ ?

* * * *

೧೦೦೦ ಕಿ. ವಾ. ಯಂತ್ರವನ್ನು ಆಕಾಶವಾಣಿಯು ಆಮದುಮಾಡಿ ಉಪಯೋಗಿಸುವುದಂತೆ

ಈಗಲೇ ಸುಸ್ತಾಗಿ ಬಿಟ್ಟಿದ್ದೀವಿ, ಇನ್ನೂ ೧೦೦೦ ಕಿ. ವಾ. ಆದರೆ ಕಿವಿ ಕಿವುಡಾಗಿ ಬಿಡಲ್ಲವೇ ? ಅಂತ ಹೆಬ್ಬಿಗುಬ್ಬಾಲೆಯವರು ಪ್ರಶ್ನಿಸಿದ್ದಾರೆ,

* * * *

ಈ ಬಾರಿಯ ದೀಪಾವಳಿ ಸಂಚಿಕೆಗಳು ಸಪ್ಪೆ ಎಂದೊಬ್ಬ ವಿಮರ್ಶಕರ ಟೀಕೆ

ಯಾಕೆ ? ವಿಮರ್ಶಕರೇ ? ನಿಮ್ಮ ಲೇಖನವನ್ನು ಯಾರೂ ಸ್ವೀಕರಿಸಲಿಲ್ಲವೆ ?

ಭುಟ್ಟೋ ನಾಗರೀಕತೆ

★

ಕೊರವಂಜಿಯ ಸಂಪಾದಕರೆ :—

ಹತ್ತು ಶತಮಾನಗಳಿಂದ ನಮ್ಮ ಭಾರತವನ್ನು ಆಳುತ್ತಿದ್ದ ಪಾಕಿಸ್ತಾನಿಗಳಿಗೆ ಕಾಶ್ಮೀರವನ್ನು ಕೊಡುವುದಿಲ್ಲವೆಂದು ಭಾರತ ಹಠ ಹಿಡಿಯಬಾರದು. ವಿಶ್ವಸಂಸ್ಥೆಯಲ್ಲಿ ಶ್ರೀಮಾನ್ ಜುಲ್‌ಫಿಕರ್ ಭುಟ್ಟೋ (ಈತನಿಗೆ ಜುನಘಡದಲ್ಲಿ ಓಡಿಹೋಗಲು ಭಾರತ ಅವಕಾಶ ಕೊಟ್ಟಿತ್ತು) ಒಂದೇ ಸಮ ಈ ಸತ್ಯವನ್ನು ಸಾರುತ್ತಿದ್ದಾನೆ. ಒಮ್ಮೊಮ್ಮೆ ಭುಟ್ಟೋವಿನ ಬಾಯಿಗೆ ಚಿಣವೇ ಗಂಟಲು ದಾನ ಮಾಡಿತೇ ಅನ್ನೋ ಸಂದೇಹ ಬರುವಂತೆ ಆತ ಬೊಗಳಿದ್ದಾನೆ ಹೀಗೆ ಸಾರುವಾಗ ಆತ ಉಪಯೋಗಿಸಿದ ಭಾಷೆ ಅತಿ ನಾಗರೀಕತೆಯದಾಗಿತ್ತು. ಹೊಸ ಫ್ಯಾಷನ್-ಟಾಪ್‌ಲೆಸ್ ಈಜು ಉಡುಗೆ ರೀತಿ—ಅನಾಗರೀಕರಾದ ನಮ್ಮನ್ನು ನಾಗರೀಕರನ್ನಾಗಿ ಮಾಡಿದ್ದೇ ಪಾಕಿಸ್ತಾನ ಎಂದು ಆತನೇ ಪ್ರಪಂಚಸಂಸ್ಥೆಯ ಮುಂದೆ ಹೇಳಿದ ಮೇಲೆ ಜಗತ್ತಿಗೆ ಅನುಮಾನವೆಲ್ಲಿಂದ ಬಂತು ? ಕಾಶ್ಮೀರ ಒಂದೇ ಅಲ್ಲ ಇಡೀ ಭಾರತವನ್ನು ಮೊಗಲ್ ದರಬಾರಿಗೆ ಮತ್ತೆ ಒಪ್ಪಿಸಬೇಕಾದ್ದು ಜಗತ್ತಿನ ಕರ್ತವ್ಯ.

ಶತಶತಮಾನಗಳಿಂದ ನಮ್ಮ ನಾಡನ್ನು ನಾಗರೀಕತೆಯ ಕಡೆಗೆ ಕರೆದೊಯ್ಯುತ್ತಿರುವುದರ ನೆನಪಿಗಾಗಿ ಕೆಲವು ಶಾಶ್ವತ ಸ್ಮಾರಕಗಳನ್ನೂ ಖೈಬರ್‌ಪಾಸ್ ಮೂಲಕ ಬಂದ ಅವರು ಬಿಟ್ಟಿಹೋಗಿದ್ದಾರೆ.

೧. ಗುಜರಾತಿನ ಸೋಮನಾಥ ದೇವಾಲಯದ ಕೆತ್ತನೆ ಕೆಲಸವನ್ನು ಹೇಗೆ ಮಾಡಿದ್ದಾರೆ ! !

೨. ಹಳೇಬೀಡಿನ ಕಲೆಯ ಬೀಡನ್ನು ಅವರು ನೆನಿಸ್ಕೊಳ್ಳೋ ರೀತಿ ಮಾಡಿದ್ದಾರೆ,

೩. ವಿಜಯನಗರದ ರಾಜಧಾನಿ ಹಾಳು ಹಂಪೆ ಆಗುವಂತೆ ಶ್ರಮವಹಿಸಿದ್ದಾರೆ.

೪. ಕೋಟಿ ಕೋಟಿ ಹಿಂದುಗಳು ಪಾಕಿಸ್ತಾನ ಆದಮೇಲೆ ಅಲ್ಲಿನ ನಾಗರಿಕತೆ ಕಾಟ ತಡೆಯಲಾರದೆ ತೌರುಮನೆಗೇ ಹಿಂದಕ್ಕೆ ಬಂದುದು, ಕಡಿಮೆ ಉಪಕಾರವೆ?

೫. ನೂರಾರು ದೇವಮಂದಿರಗಳ ಬಾಗಿಲು ಚೌಕಟ್ಟು ಗೋಪುರಗಳ ಕಲ್ಲನ್ನು ಕಿತ್ತು ಮಸೀದಿಗಳ ಮೆಟ್ಟಿಲುಗಳನ್ನಾಗಿ ಮಾಡಿಕೊಂಡ ನಾಗರೀಕತೆ ಮರೆವುದುಂಟೆ!

೬. ನೂರಾರು ನಾರೀಮಣಿಗಳ ಮಾನಭಂಗ ಮಾಡಿ ಘೋಷಾ ತೊಡಿಗೆ ಉಡಿಸಿಕೊಂಡು ಮನೆ ತುಂಬಿಸಿಕೊಂಡ ನಾಗರೀಕ ನಾಡಿಗೆ ಭಾರತವನ್ನೇ ಬಳುವಳಿ ಯಾಗಿ ಕೊಡಬೇಕಲ್ಲವೇ ?

೭. ಹೈದರಾಬಾದ್-ಜುನಘಡ-ಇವುಗಳು ಭಾರತಕ್ಕೆ ಸೇರಿದ್ದರಿಂದ ಅಲ್ಲಿನ ನಾಗರೀಕತೆ ಮತ್ತೆ ಹಿಂದಕ್ಕೆ ಸರಿಯುತ್ತದೆ. ಕಾಶ್ಮೀರದ ನಾಗರೀಕತೆ ಸುಧಾರಿಸಲು ಸಾಧುಗಳ ವೇಷದಿಂದ ಕೋವಿ ಹಿಡಿದು ನುಗ್ಗಿದ ಫಕೀರರಿಗೆ ಸ್ವಾಗತಿಸಿ ಕಾಶ್ಮೀರವನ್ನು ಅವರಿಗೆ ಧಾರೆ ಎರೆದು ಕೊಡಬೇಕು

೮. ಬಾದ್‌ಷಹಾ ಅಯುಬ್‌ಖಾನನಿಗೆ ಆನೆಮೇಲೆ ಅಂಬಾರಿ ಹಾಕಿ ದೆಹಲಿಗೆ ಕರೆತಂದು "ಅಯ್ಯಾ ನಮ್ಮ ನಾಡನ್ನು ಹತ್ತು ಶತಮಾನದಿಂದ ಉದ್ಧಾರಮಾಡಿ ದ್ದೀರಿ...ಮುಂದೂ ಈ ದೆಹಲಿ ಸಿಂಹಾಸನ ಏರಿ ಕೂತು ನಮ್ಮ ವೇದಗಳನ್ನು— ರಾಮಾಯಣ—ಭಾಗವತಗಳನ್ನು ಸುಟ್ಟುಹಾಕಿಸಿ ನಮಗೆಲ್ಲರಿಗೂ ಮುಂಜಿ ಮಾಡಿಸಿ ಉದ್ಧಾರಮಾಡಯ್ಯ" ಎಂದು ಪಟ್ಟಾಭಿಷೇಕ ಮಾಡಿಸಬೇಕಲ್ಲವೆ ?

೯. ಬ್ರಿಟಿಷ್‌ನೋರು ಅಯುಬಿನ ಮೂಲಕ ಮತ್ತೆ ನಮ್ಮನ್ನಾಳಿದರೂ ಆಳಲಿ ಎಂದು "God Save the Queen." ಡಗ್ಗು ಸಲಾಮು ಹೊಡೆದು ಕೊಂಡು ಅವರುಗಳಿಗೆ 'ಜೈ' ಅನ್ನಬೇಕು—ನಾವು ಹಿಂದುಳಿದ ಅನಾಗರೀಕರು— ಅವರು ಮುಂದರಿದ ಮಹಾ ಬುದ್ಧಿವಂತರು.

೧೦. ಅವರ ಹಿತಕ್ಕಾಗಿ ಭಾರತೀಯರೆಲ್ಲ "ಹಲ್ಬಿದಾಯಕ್ಯಾಹುಸೇನಿ ಹೇಳ ಬೇಕು ಒಕ್ಕೊರಳಿನಿಂದ.

ಜೈ ಭುಟ್ಟೊ ಅನ್ನಬೇಕು.

—ಎಂದಾಗ ನಮ್ಮೂರಹೈದ-"ಉಗಿದಿಟ್ಟಲೇ" ಎಂದಿದ್ದ ಭಟ್ಟ ಪ್ಯಾಟನ್ ಟ್ಯಾಂಕು, ಸಾಬರ್ ಜಟ್ಟು ನ್ಯಾಟ್‌ಗಳು ಹೇಗೆ ಹೊಡೆದವು ಮುಟ್ಟಿ ನೋಡ್ಕೊ ಅಂತ ಹೇಳಿ ಸಾಕು ಅಂತ ಅಂದೆ,

—ಸಂಪಾದಕ

ಸಕ್ಕರೆಯ ಹತೋಟಿಯನ್ನು ಮುಂದಿನ ವರ್ಷದಿಂದ ತೆಗೆದುಹಾಕಬೇಕೆಂದು ನಿರ್ಣಯಿಸಲಾಗುತ್ತದಂತೆ

—ಈ ಸುದ್ದಿ ಕೇಳಿ ಈ ದೀಪಾವಳಿಯಲ್ಲಿ ನಮ್ಮ ಅಳಿಯನ ಬಾಯಿ ಸಿಹಿಯಾಯಿತು !

* * * *

ವಂಕಿ

"ವಂಕಿ ಹಾಕ್ಕೊಂಡು ಬರ್ತೀನಿ, ಅಜ್ಜಿ ; ಅರ್ಧ ಗಂಟೇಲಿ ಬಂದು ಬಿಡ್ತೀನಿ. ಇಲ್ಲೇ ಇರು, ಯಾರಾದರೂ ಬಂದು ಕೇಳಿದರೆ, ಬಂದು ಬಿಡ್ತಾಳೆ ಕೂತುಕೊಳ್ಳಿ ಅಂತ ಹೇಳು" ಎಂದು ಹೇಳಿ ಮಿನಾರಾಣಿ ಅಸ್ಪತ್ರೆಗೆ ಹೋದಳು.

ಅಜ್ಜಿಯ ಸಂತೋಷಕ್ಕೆ ಪಾರವೇ ಇಲ್ಲ. ಕೆಲವು ದಿನಗಳ ಹಿಂದೆ ಬೆಳೆದ ಮೊಮ್ಮಗಳನ್ನು ಬೈದಿದ್ದಳು. "ಇದೇನು ಮಿನು ? ಬಲಕೈಯೆಲ್ಲಾ ಬೋಳು ಬೋಳಾಗಿದೆ. ಲಕ್ಷಣವಲ್ಲಮ್ಮ ಅದು. ಎಡಗೈಲಿ ಎಂಟು ಬಳೆ ಹಾಕೋಬದಲು ಅದಕ್ಕೆ ನಾಲ್ಕು ಬಲಗೈಗೆ ನಾಲ್ಕು ಹಾಕ್ಕೋ ! ಎಷ್ಟೋ ಲಕ್ಷಣವಾಗಿ ಕಾಣುತ್ತೆ, ಹೆಣ್ಣು ಮಗಳು ಬಡಿಸೋವಾಗ ಘಲ್ ಘಲ್ ಅಂತ ಶಬ್ದ ಆದರೆ ಊಟ ರುಚಿಸುತ್ತೆ ಕಣೆ, ಗಂಡಸರಿಗೆ" ಎಂದು ಅಂದು ಆಡಿದ್ದಳು.

ತನ್ನ ಮದುವೇಲಿ ಕೊಟ್ಟಿದ್ದ ಹಳೇಕಾಲದ ಒಡವೆಗಳನ್ನೆಲ್ಲಾ ಸೊಸೆ ಬೇಡಮ್ಮ ಅಂತ ಅಂದಿದ್ದಳು. ತನ್ನ ಕಣ್ಣೆದುರಿಗೇ ಒಂದೊಂದನ್ನಾಗಿ ಆ ಹಳೆ ಒಡವೆಗಳನ್ನ ಕರಗಿಸಿ. ಮೇಲೆ ಹಣ ತೆತ್ತು, ಹೊಸನಮೂನೆ ಒಡವೆ ಮಾಡಿಸಿಕೊಂಡಿದ್ದಳು ಆ ಸೊಸೆ ನಾಗಮುರಿಗೆ ಚೋಳತೊಂಬು ಎರಡು ಉಳಿದಿತ್ತು ಸಂದೂಕಿನಲ್ಲಿ, ಸೊಸೆಗೆ ಕಾಣದ ಹಾಗೆ ಅದನ್ನು ಜೋಪಾನ ಮಾಡಿಟ್ಟಿದ್ದಳು ಅಜ್ಜಿ.

ಈಗ ಮೊಮ್ಮಗಳು "ವಂಕಿ" ಯ ಮಾತೆತ್ತಿದಾಗ ಅಜ್ಜಿ ಹೊಟ್ಟೆ ತಂಪಾಯ್ತು. ನಮ್ಮನೇಲಿಹುಟ್ಟಿದ ಹೆಣ್ಣು ನನ್ನ ಒಡವೇನ ನಾನು ಹಾಕಿಕೊಂಡ ಹಾಗೆಯೇ ಹಾಕಿ ಕೊಂಡರೆ ನೋಡಿ ಸಂತೋಷ ಪಡಬಹುದು ಎಂದು ಕೊಂಡಳು.

"ವಂಕಿಹಾಕೊಂಡು ಬರಲಿ ಮಿನು, ಆಮೇಲೆ ಅವಳಿಗೆ ಎರೆದು, ತುದಿಗಂಟ್ಲಾಕಿ ಸಾಂಬ್ರಾಣಿ ಹೊಗೆಕಾಯಿಸಿ, ಆಮೇಲೆ ಅವಳ ಕಿವಿಗೆ ನನ್ನ ಕೈಯಿಂದಲೇ ಚಳತೊಂಬು ಹಾಕ್ತೀನಿ. ನಾಗಮುರಿಗೇನ ಸಿಕ್ಕಿಸ್ತೀನಿ. ಆಗ ಅವರಮ್ಮನಿಗೆ ತುಸು ಬೇಸರ ಆಗಬಹುದು. ಈ ಒಡವೆಗಳನ್ನ ಮುದುಕಿ ಕದ್ದು ಮುಚ್ಚಿಟ್ಟಿದ್ದಳು ಅಂತ ರೇಗಿದರೆ ರೇಗಲಿ. ನನ್ನ ಒಡವೆ ನಾನು ಏನು ಬೇಕಾದರೂ ಮಾಡಿಕೋತೀನಿ" ಎಂದು ಮನ ಸ್ಸಿನಲ್ಲಿಯೇ ಯೋಜನೆ ಹೂಡಿದಳು. ಮೆಲ್ಲಗೆ ಹೋಗಿ ಸಂದೂಕತೆಗೆದು, ಚಳತೊಂಬು ನಾಗಮುರಿಗೆಯನ್ನು ಉಡಿಯಲ್ಲಿ ಹುದುಗಿಸಿಟ್ಟಳು.

ಮಿನಾರಾಣಿ ಹಿಂತಿರುಗುವುದನ್ನೇ ಎದುರುನೋಡುತ್ತ ಕಾದಳು. ಮಿನಾರಾಣಿ ಹಿಂತಿರುಗಿ ಬಂದಳು.

"ಅಜ್ಜೀ ! ಯಾರಾದರೂ ಸ್ನೇಹಿತರು ಬಂದಿದ್ದರೇ" ಎಂದು ಕೇಳಿದಳು.

"ಯಾರೂ ಬರಲಿಲ್ಲ ಮಿನು ! ಅಪರೆ ವಂಕಿ ಹಾಕ್ಕೊಂಡು ಬರ್ತೀನಿ ಅಂತ ಹೋದೆಯಲ್ಲೇ ? ಎಲ್ಲೇ ವಂಕೀ ?" ಎಂದು ಅಜ್ಜಿ ಕೇಳಿದಳು.

"ಅಯ್ಯೋ ! ಅಜ್ಜಿ !..." ಎಂದು ಮಿನಾ ಮನೆಯೊಳಕ್ಕೆ ಓಡಿದಳು-ಪಾಪ ! ಅಜ್ಜಿಗೆ "ವಂಕಿ" ವಿಷಯ ಏನುಗೊತ್ತು ? ಆ ವಯಸ್ಸಿನಲ್ಲಿ ಯಾಕೆ ಗೊತ್ತಾಗಬೇಕು ?

ಅ. ಕ. ಸಂಭಾಷಣೆ

" ಅಲ್ರೀ ! ನಾಚಿಕೆ ಆಗಬೇಡವೇ ? ಆತನಿಗೆ " ಎಂದರು. ಅ.

" ಅಷ್ಟುವಯಸ್ಸಾಯಿತು, ತಲೆನರೀತು, ಆದರೂ ಬುದ್ಧಿ ಬಂದಿಲ್ಲವಲ್ಲ " ಅಂದರು. ಕ.

ವಿಶ್ರಾಂತಿ ವೇತನ ಪಡೆದು ಒಂದು ವರ್ಷ ಆಯ್ತಂತಿರೀ " ಅಂದರು, ಅ.

" ಅಂದಮೇಲೆ ಅರವತ್ತಾದರೂ ಆಗಿರಬೇಕು. ಸುಳ್ಳುವಯಸ್ಸುಕೊಟ್ಟೇ ಕೆಲಸಕ್ಕೆ ಸೇರಿರೋದು. ದ್ವಿಜರಲ್ಲವೇನ್ರಿ ? ಎರಡು ಹುಟ್ಟಿದ ಹಬ್ಬ ಅವಕ್ಕೆ " ಅಂದರು, ಕ,

" ಅರವತ್ತೇನು ಬಂತು ? ಇನ್ನೂ ೩–೪ ಆದರೂ ಆಗಿರಬಹುದು. ಕಳಿಯೋ ಲೆಕ್ಕದಲ್ಲಿ ಬಲು ಚೂಟಿ. ಅವ. ಅಪ್ಪನ ಆಸ್ತಿನೆಲ್ಲಾ ಪ್ರಾಯದಲ್ಲೇ ಕಳೆದಿದ್ದ, ಅಂದರೆ ವಯಸ್ಸಿನಲ್ಲಿ ಕೂಡ ಚೆನ್ನಾಗಿ ಕಳದೇ ಕೊಟ್ಟಿರ್ತಾನೆ ! ಘಟಿಂಗ " ಅಂದರು ಅ

ಆದರೂನೂ ರಿಟಾಯರ್ ಆದಮೇಲೆ ಎಲ್ಲರೆದುರಿಗೂ ಸ್ವಲ್ಪ ಮಾನವಾಗಿ ನಡಕೋಬಾರದೆ " ಎಂದರು, ಕ

" ಸಾಯಂಕಾಲ ಪ್ರಾಣ ದೇವರ ಗುಡಿಗೆ ಪುರಾಣಕ್ಕೆ ಬಂದು ಕೂತುಕೋತಾನೆ ಪುಣ್ಯಾತ್ಮ ! ಕಿವಿಹಿಂದೆ ತುಳಸಿದಳ ಏನು ? ಅಂಗಾರ ಏನು ? ಅಕ್ಷತೆ ಏನು ? ನೋಡಿದರೆ ನೀವಳಿಸಿ ತೆಂಗಿನಕಾಯಿ ಒಡೆಯೋಣ ಅನ್ನಿಸುತ್ತೆ " ಅಂದರು. ಅ,

" ಅಂತಹ ಬೂಟಾಟಿಕೆ ಆಸಾಮಿ ಬೆಳಗಾಗುತ್ತಲೂ ನೋಡಿ ಈಗ ? ಅಂದರು ಕ.

"ಸರ್ವೀಸಿನಲ್ಲಿದ್ದಾಗ ರಂಗಿನ ಹೆಸರು ಸಂಪಾದಿಸಿದ್ದ; ಗೊತ್ತೆ " ಅಂದರು ಅ.

" ಕೇಳಿದ್ದೆನಪ್ಪಾ ! ತಕ್ಕ ಸಾಹೇಬರೂ ಇದ್ದರಂತೆ. ಸಾಹೇಬರು ಮೇಜಿನ ಮುಂದೆ ಕೂತು ಗ್ಲಾಸಿಲ್ಲಿ ಕುಡಿದರೆ, ಇವ ಮೇಜಿನ ಮೇಲೆ ಕೂತು ಶೀಸಾಯಿಯ ನಲ್ಲಿಗೆ ಬಾಯಿ ಹಾಕ್ತಾ ಇದ್ದನಂತೆ " ಅಂದರು ಅ

"ಹೌದಪ್ಪ ಹೌದು. ಬಿಳಿ ಕುದುರೆ ಸವಾರಿ ಎಂದರೆ ಎತ್ತಿದ ಕೈ ಅವ" ಅಂದರು ಕ.

ಬಿಳಿ ಕುದುರೆ ಅಂತ ಕಾಯ್ತಾ ಇರಲಿಲ್ಲಪ್ಪ, ಸಿಕ್ಕಿದ್ದು ಬಿಡಬಾರದು ಅಂತ ಅವನ ಮಂತ್ರ. ಬಿಳಿ ಕುದುರೆ ಸಿಕ್ಕಿತು ಅಂದರೆ ಆಪೋಶಣೆ ಮಾಡ್ಕೊಂಡು ಕುಡೀತಿದ್ದ. ಈಚಲಮರದಪ್ಪ ದೊರಕಿದರೆ ಬುಡ್ಡಿನೇ ಬಾಯಿಗೆ ಬಗ್ಗಿಸುತ್ತಿದ್ದ. ಬಲು ಬಾಯಾರಿಕೆ ಮುಂಡೇದಕ್ಕೆ. ಬಾಯಿಂದ ಹೊರಗಡೇನೇ ನಾಲಿಗೆ ಆಡ್ತಾ ಇರೋದು" ಎಂದರು ಅ.

"ಏನಾದರೂ ಮಾಡಿಕೊಳ್ಳಲಿ, ಪಡಖಾನೇಲೋ, ಪ್ರಸವ ಮಂದಿರದಲ್ಲೋ ಆದರೆ ಬೆಳಗಾಗಂತ್ಲೂ ಬಹಿರಂಗವಾಗಿ ರಾಜಬೀದೀಲಿ ಆ ತರಹಾ ?" ಎಂದು ಪ್ರಶ್ನೆ ಸೂಚಕ ಹುಬ್ಬೆತ್ತಿದರು ಕ.

"ಅದೂ ನೋಡ್ರಿ! ಈ ಅಪರ ವಯಸ್ಸಿನಲ್ಲಿ! ಮನೆ ತುಂಬ ಬೆಳೆದ ಮಕ್ಕಳು ಹಾಗಿದ್ದೂ್ರ ನಡವಳಿಕೆ ಹೀಗಲ್ರೀ" ಎಂದರು ಅ.

* * * *

ಕಾರಣ ಇಷ್ಟೆ. ಬೆಂಗಳೂರು ಮಿಲ್ಕ್ ಡ್ಯೆರಿಯವರು ಪಹರಿನ ಒಂದೊಂದು ಬಡಾವಣೆಯಲ್ಲೂ ಸರಬರಾಜು ಕೇಂದ್ರಗಳನ್ನು ಏರ್ಪಡಿಸಿದ್ದರು. ರಿಟಾಯರ್ ಆದ ರಾಯರು, ಹಾಲು ತೆಗೆದುಕೊಂಡು ಬರಲು ಆಳು ಇಲ್ಲದ ಕಾರಣ, ಬೇರೆ ಕೆಲಸ ಇಲ್ಲದುದರಿಂದ, ತಾವೇ ಬೆಳಗಾಗ ಎರಡು ಖಾಲಿ ಶೀಷೆಗಳನ್ನು ಕೈಲಿ ಬೀಸುತ್ತಾ ಹಾಲಿನ ಕೇಂದ್ರದತ್ತ ಹೋಗುತ್ತಿದ್ದರು. ಅ. ಕ. ಕಂಡರು. ಮಾತನಾಡಿಕೊಂಡರು.

ನಾಗಾಲ್ಯಾಂಡಿನಲ್ಲಿ ಶಾಂತಿ ಕಾಲವನ್ನು ಒಂದೇ ತಿಂಗಳಿಗೆ ನಿಗದಿ ಮಾಡಿ ಎಂದು ಹುದುಗಿಕೊಂಡಿರುವ ನಾಯಕರು ಅಂದರಂತೆ.

—ಅಂದರೆ ಪಾಕಿಸ್ತಾನದಿಂದ ಸಾಕಷ್ಟು ನೆರವು ಪಡೆದಾಗಿರಬೇಕು.

* * * *

ಚಿನ್ನದ ಬಳೆಗಳಿಗೆ ನಮ್ಮ ಮೀನಾಕ್ಷಿ ಈಗ ಬೆಳ್ಳಿ ಮುಲಾಮು ಬಳಿಸಿ, ಖದ್ದರ್ ಸೀರೆ ಉಟ್ಟು, ಮೆರೆಯುತ್ತಿದ್ದಾಳೆ.

* * * *

ಕಾರಣ

ದೇವಸ್ಥಾನದ ಅಂಗಳದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಆ ಸಂಜೆ ಆಚಾರ್ಯರ ಭಾಷಣ ಏರ್ಪಾಡಾಗಿತ್ತು. ಓದುಬರಹ ಬಾರದ ವಿದ್ಯಾವಂತರೆಲ್ಲರೂ ಸಭೆ ಸೇರಿದ್ದರು. ಸಾಮಾನ್ಯವಾಗಿ ಪುರಾಣಕ್ಕೆ ಸೇರುವ ವಿಶ್ರಾಂತಿ ವೇತನ ಪಡೆದ ಕಿವುಡರು, ವಿಶ್ರಾಂತಿ ಪಡೆದ ಹೆಂಗಸರು, ಇವರ್ಯಾರೂ ಇತ್ತಿಲ್ಲ. ಆಚಾರ್ಯರು ಇಂಗ್ಲೀಷ್, ತೆಲುಗು. ಸಂಸ್ಕೃತ, ಕನ್ನಡಗಳಲ್ಲಿ ಉದ್ದಾಮ ಪಂಡಿತರು. ಅವರ ಭಾಷಣ ಸಾಮಾನ್ಯರಿಗೆ ರುಚಿಸುವಂತಿರಲಿಲ್ಲ. ಆದರೆ ತುಸು ತಿಳಿದವರಿಗೆ ಹಾಲ್ಜೇನು ಸೇವಿಸಿದಂತೆ, ಆಚಾರ್ಯರ ಭಾಷಣ.

ದಾಸರ ಆಶೀರ್ವಾದದ ಹಾಡನ್ನು ತೆಗೆದುಕೊಂಡು ಆಚಾರ್ಯರು ಭಾಷಣಕ್ಕೆ ಪ್ರಾರಂಭಿಸಿದರು.

ಲೋಕವಾರ್ತೆಯು ನೀನು ಕಿವಿಗೆ ಕೇಳಿಸಲಿ ಬೇಡ.

ಅಂದರೆ ಗಾಳಿ ಸುದ್ದಿಗಳಿಗೆ ಕಿವಿಕೊಡಬೇಡ. ಅವರಿವರ ವಿಷಯದಲ್ಲಿ ಆಡಿಕೊಳ್ಳುವ ಚಾಡಿ ಸುದ್ದಿಗಳನ್ನು ಕಿವಿಗೆ ಹಾಕಿಕೊಳ್ಳಬೇಡ.

ಲೋಕೇಶನಾ ಚರಿತೆ ಕೇಳದಿರಬೇಡ,

ಭೂಲೋಕದಲ್ಲಿ ನಡೆಯುವ ಎಲ್ಲ ವಿಷಯಗಳೂ ಲೋಕೇಶನ ಕೈವಾಡದಿಂದಲೇ ಆಗುತ್ತಿರುವುದರಿಂದ, ಎಲ್ಲ ವಿಷಯಗಳನ್ನೂ ಕಲಿಯಬೇಕು, ತಿಳಿದುಕೊಳ್ಳಬೇಕು. ಆಗಲೇ ವಿಶ್ವರೂಪವನ್ನು ಕಂಡಂತೆ ಆಗುತ್ತದೆ. ಲೋಕೇಶನಾ ಚರಿತೆಯೋ ವಿಶ್ವದ ರೂಪ.

ಪಾಕವನು ಮಾಡಿ ಒಂಟಿಯಲಿ ಉಣಬೇಡ.

ಭೂಕಾಂತರನನುಸರಿಸಿ ತಿರುಗಾಡಬೇಡ.

ಜತೆ ಜತೆಯಲ್ಲ ಊಟ ಮಾಡಿದರೆ ನಗುನಗ್ತಾ ಉಂಡರೆ ತಿಂದದ್ದು ಜೀರ್ಣವಾಗುತ್ತೆ. ಉಂಡದ್ದು ಮೈಗೆ ಹತ್ತುತ್ತೆ ಹಾಗೆಯೇ ಶ್ರೀಮಂತರನ್ನು ಹಿಂಬಾಲಿಸಿ ನಿಮ್ಮ ಆತ್ಮ ವಿಶ್ವಾಸವನ್ನು ಕಳೆದುಕೊಳ್ಳಬೇಡಿ.

ಸಾಲ ಮಾಡಲಿ ಬೇಡ.
ಸಾಲದೆಂದೆನ ಬೇಡ.

ಎಂದರು ಆಚಾರ್ಯರು. ವಿವರಣೆ ಕೊಡಲು ಶುರು ಮಾಡಿದರು. ಎದುರಿನ ಮೂರನೇ ಸಾಲಿನಲ್ಲಿ ಕೂತಿದ್ದ ಯುವಕನೊಬ್ಬ ಅತ್ತಿತ್ತ ಒದ್ದಾಡುವುದಕ್ಕೆ ಶುರು

ಮಾಡಿದ. ತೊಣಚಿ ಹೊಕ್ಕ ನಾಯಿಯು ಹಾಗೆ ಒದ್ದಾಡಲು ಶುರುಮಾಡಿದ. ಚಾಪೆ ಮುಳ್ಳಿನಮೇಲೆ ಒಣಗಿಸಿದ ಚಡ್ಡಿ ಹಾಕಿಕೊಂಡವನಂತೆ ಮಿಲಿ ಮಿಲಿ ಕುಲುಕಾಡಿದ, ಆಚಾರ್ಯರು ಇದನ್ನು ಕಂಡರು. ದಾಸರಾಯರ ನುಡಿಯನ್ನು ನಾನು ಹೇಳಿದಾಗ ಇವನಿಗೆ ಮನಸ್ಸು ಕುಕ್ಕಿದೆ. ಎಲ್ಲೋ ಸಾಲ ಮಾಡಿದ್ದಾನೆ. ಅದಕ್ಕೇ ಒದ್ದಾಡು ತ್ತಿದ್ದಾನೆ. ಎಂದು ಅಂದುಕೊಂಡರು.

ನಾಳಿಗೆ ಹೇಗೆಂಬ ಚಿಂತೆ ಬೇಡ,

ಮುಂದುವರಿಸಿದರು ಆಚಾರ್ಯರು, ತಮ್ಮ ಭಾಷಣವನ್ನು.

ಎದುರಿನಲ್ಲಿದ್ದ ಯುವಕ ಇನ್ನೂ ಒದ್ದಾಡುತ್ತಲೇ ಇದ್ದ, ಕಿರಿಕಿರಿ ಪಡುತ್ತಲೇ ಇದ್ದ. ಕಾತರ ತುಂಬಿದವನಂತಿದ್ದ.

ಮರೆಯಬೇಡ ಹರಿಯ ಮರೆಯಬೇಡೆಂದೆಂದು
ತಿರಿಯಬೇಡ ಖಳರ ಮನೆಗಳಿಗೆ ಹೋಗಿ
ಒರಿಯಬೇಡನ್ಯರಿಗೆ ಪರ ತತ್ವಗಳನ್ನೆಲ್ಲ
ಬೆರೆಯಬೇಡ ಅನ್ಯ ಸ್ತ್ರೀಗಳನು ಸ್ವಪ್ನದಲಿ.

ಈ ನುಡಿಯನ್ನು ಹೇಳಿ ವಿವರಿಸ ಹೋದರು ಆಚಾರ್ಯರು. ಆದರೆ ಈಗ ಆ ಯುವಕ ಸಂತಸದಿಂದ ಕುಳಿತುಕೊಂಡಿದ್ದ.

ಆಚಾರ್ಯರಿಗೆ ಅತಿ ಕೌತುಕ ಉಂಟಾಯಿತು. ಭಾಷಣವನ್ನು ಮುಗಿಸಿದ ಕೂಡಲೇ ಆ ಯುವಕನನ್ನು ಭೇಟಿಯಾದರು.

" ಯಾಕಪ್ಪ ಸ್ವಲ್ಪ ಹೊತ್ತು ಹಾಗೆ ಒದ್ದಾಡುತ್ತಿದ್ದೆ " ಎಂದು ಕೇಳಿದರು.

ಸ್ವಾಮಿ ! ಸಾಲ ಮಾಡಲಿಬೇಡ ಎಂದು ನೀವಂದಾಗ, ಕಚೇರಿ ಸ್ನೇಹಿತನ ಹತ್ತಿರ ಹತ್ತು ರೂಪಾಯಿಗಳ ಸಾಲ ತಂದಿದ್ದುದ ನೆನಪಾಯ್ತು. ಮೂರು ದಿನಗಳ ಹಿಂದೆ ಸಾಲ ತೆಗೆದಿದ್ದೆ, ಅದನ್ನು ಹೇಗೆ ಖರ್ಚುಮಾಡಿದೆ ಎಂದು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದೆ. ಜ್ಞಾಪಕಕ್ಕೆ ಬರಲೇ ಇಲ್ಲ. ಒದ್ದಾಡಿದೆ. ಆದರೂ ನೆನಪು ಬರಲಿಲ್ಲ. ತಿಣುಕಾಡಿದೆ. ಮರವೇ ಮುಚ್ಚಿಕೊಂಡಿತ್ತು.

ಆದರೆ ಮಹಾಸ್ವಾಮಿ, ಬೆರೆಯಬೇಡ ಅನ್ಯ ಸ್ತ್ರೀಗಳನ ಸ್ವಪ್ನದಲಿ ಎಂದು ತಾವು ಅಂದಾಗ ಜ್ಞಾಪಕಕ್ಕೆ ಬಂತು. ಸಂತಸದಿಂದ ಕೂತೆ " ಎಂದು ವಿವರಣೆ ಇತ್ತ, ಯುವಕ.

ತಲೆ ತಲೆ ಚಚ್ಚಿಕೊಂಡರು ಆಚಾರ್ಯರು.

★ ★ ಪ್ರೊಕ್ಯೂರ್ಮೆಂಟ್ ★ ★

★

ನಾವೀಗ ಗಂಡಾಂತರ ಪರಿಸ್ಥಿತಿಯನ್ನೆದುರಿಸುತ್ತಿದ್ದೇವೆ. ರೈತರು, ಕಾರ್ಮಿಕರು, ಅಧಿಕಾರಿ ವರ್ಗದವರು, ನಾಯಕರು ಎಲ್ಲರೂ ತಮ್ಮ ತಮ್ಮ ಕರ್ತವ್ಯವನ್ನೆದುರಿಸುತ್ತಿದ್ದಾರೆ. ಎಂದರೆ ಕರ್ತವ್ಯ ಪಾಲನೆಗಾಗಿ ಶ್ರಮಿಸುತ್ತಿದ್ದಾರೆ. ಆದರೆ ಈ ಕರ್ತವ್ಯ ಬುದ್ಧಿಯು ಈ ವರ್ಷದ ಮುಂಗಾರು ಮಳೆಗೆ ಬರಲಿಲ್ಲ. ಆರಂಭವಾಗುವಾಗಲೇ ಬೇಕೋ ಬೇಡವೋ ಎಂದು ಆರಂಭವಾಯಿತು. ಬೆಳವಣಿಗೆಯಲ್ಲಿ ಅದು ಶಾಲೆಯ ಮಕ್ಕಳಂತೆ ಕುಂಠಿತವಾಗಿ ಹೋಯಿತು. ಪ್ರೌಢಾವಸ್ಥೆಯ ವೇಳೆಗೆ ಅದು ಸಮತೆಯನ್ನು ಹೊಂದಿದ ಯೋಗಿಯಂತೆ ಅಂತರ್ಮುಖಿಯಾಯಿತು.

ವರ್ಷಾರಂಭದಲ್ಲೇ ರೈತರು ಮುಂಗಡು ಬಿತ್ತಲಿಲ್ಲ. ತಳಹಸಿಯೇ ಇಲ್ಲದೆ ಬಿತ್ತುವುದು ಹೇಗೆ. ತಳಹಸಿ ಈ ವರ್ಷ ಆಗಲೇ ಇಲ್ಲ. ಬಹುಶಃ ಪರ್ಜನ್ಯ ದೇವರು ಭಗವದ್ಗೀತೆಯನ್ನು ಓದಿದ್ದೇ ಇದಕ್ಕೆ ಕಾರಣವಾಗಿರಬಹುದು. ಪತ್ರಿಕೆಗಳನ್ನು ಓದಿ ಲೇಟೆಸ್ಟ್ ವರ್ತಮಾನ ತಿಳಿದಿದ್ದರೆ " ಏನೋ ನಮ್ಮ ಹುಡುಗರು ಪ್ರೊಕ್ಯೂರ್ಮೆಂಟ್ ಆರ್ಡರ್ ಮಾಡಿದ್ದಾರೆ. ಕಾಲಕ್ಕೆ ಸರಿಯಾಗಿ ಮಳೆಗರೆಯಬೇಕು " ಎಂದುಕೊಳ್ಳುತ್ತಿದ್ದನೋ ಏನೋ.

" ದೇವತೆಗಳೇ ನೀವು ಮನುಷ್ಯರ ಹಿತರಕ್ಷಣೆ ಮಾಡಿ. ಮಾನವರೇ ನೀವು ದೇವತೆಗಳಿಗೆ ಹವಿಸ್ಸನ್ನು ನೀಡಿ ಸಂಭಾವಿಸಿರಿ. ಪರಸ್ಪರ ಸಂಭಾವನೆಯಿಂದ ಲೋಕ ಅಭಿವೃದ್ಧಿಗೊಳ್ಳಲಿ " ಎಂದು ಭಗವಂತ ಹೇಳಿದನಂತೆ. ಆದುದರಿಂದ ತನಗೆ ಹವಿಸ್ಸನ್ನು ನೀಡದ ಜನತೆಗೆ ತಾನು ಮಳೆಗರೆಯುವುದಿಲ್ಲ ಎಂದು ಪರ್ಜನ್ಯ ದೇವನು ಸ್ವಸ್ಥವಾಗಿ ಸುಪೀರಿಯರ್ ಆಫೀಸರಂತೆ ಮನೆಯಲ್ಲಿದ್ದುಬಿಟ್ಟ.

ಆದುದರಿಂದ ತಳಹಸಿಗಾಗಿ ಕಾದ ಜನ ಇನ್ನೂ ಕಾಯುತ್ತಲೇ ಇದ್ದಾರೆ,

ಇಲ್ಲಿ ಒಂದು ಮುದ್ದೆ ಏಳುತ್ತದೆ. " ರಕ್ಷಣಾರಂಗಕ್ಕೆ ಪ್ರಥಮ ಆದ್ಯತೆ. ಆಹಾರ ರಂಗಕ್ಕೆ ಅದಕ್ಕೆ ಸರಿಸಮಾನವಾದ ಆದ್ಯತೆ ನೀಡಲೇ ಬೇಕಲ್ಲವೇ ?

ಪರ್ಜನ್ಯ ದೇವ " ಆ ರಗಳೆಯನ್ನು ನನ್ನ ಮುಂದೆ ಊದಬೇಡ " ಎನ್ನುತ್ತಾನೆ

ಮೊದಲೇ ಬಿತ್ತಿದವರ ಹೊಲಗಳು ನೋಡಲು ಬಹಳ ಅಂದವಾಗಿದ್ದವು.

ಅವನ್ನು ನೋಡಿದವರೆಲ್ಲಾ "ಬಲು ರಾಗಿ. ಈ ವರ್ಸ. ಅದ್ರ ಧರಾನೇ ಬ್ಯಾರೆ ಬಲು ರಾಗಿ !" ಎನ್ನುತ್ತಿದ್ದರು.

ಒಂದು ತಿಂಗಳ ನಂತರ, ಎರಡು ತಿಂಗಳ ನಂತರ "ಹಂಗೆ ರಾಗಿ, ಕರ್ರಗೆ ಕಪಾಗವೆ ಬಲು ರಾಗಿ" ಎನ್ನುತ್ತಿದ್ದರು.

"ನಂಜೀವಮಾನ್ದಗೇ ಇಂಥಾರಾಗಿ ನೋಡಿದ್ದಿಲ್ಲ. ಭಾರೀ ಪಾಡದವೆ. ಇಡೀ ನಮ್ಮ ಹಳ್ಳಿಗಿಲ್ಲ, ಬಲುರಾಗಿ!" ಎಂದು ಪ್ರತಿಯೊಬ್ಬರೂ ಹೇಳಿಕೊಳ್ಳುತ್ತಿದ್ದರು.

ಮಳೆ ಹೋಗಿ ಬಿಟ್ಟಿತು !

ಬರಲೇ ಇಲ್ಲ !

ಕೌರವನನ್ನು ಬಿಟ್ಟ ಕರ್ಣನಂತೆ, ಪಾಕಿಸ್ಥಾನದ ಕೈ ಬಿಟ್ಟ ಪ್ಯಾಟನ್ ಟ್ಯಾಂಕಿನಂತೆ ಹೋಗಿಯೇ ಬಿಟ್ಟಿತು. ಆದರೆ ಆಶೆ, ಕೈಬಿಡಲಿಲ್ಲ.

"ಇನ್ನೂ ಉತ್ರೆ ಮಳೆ ಐತೆ. ರೈತನಿಗೆ ಭಾಷೆ ಕೊಟ್ಟತೆ ಬರ್ತತೆ" ಎಂದುಕೊಂಡೇ ಇದ್ದರು.

ಗ್ರಾಮದೇವತೆಗಳ ಪೂಜಾರಿಗಳು ತಮ್ಮ ತಮ್ಮ ದೇವರುಗಳನ್ನು ಉಂಟುಂಗ್, ಸುಕರ್ನೋ ಕೈಯನ್ನು ಬಿಟ್ಟಂತೆ ಬಿಟ್ಟು ಎಲ್ಲಿಗೋ ಎದ್ದರು, ಎಲ್ಲಿಗೆ ಎಂದು ಕೇಳಬಹುದು ನೀವು. ಎಲ್ಲಿಗೆ ಎಂದರೆ ಹೇಗೆ ಹೇಳೋಣ. ಬೀಡಿ ಅಂಗಡಿ, ಇಸ್ಪೇಟ್ ಮನೆ ಭಟ್ಟಿವಿಕ್ರಮಾರ್ಕನ ಆಸ್ಥಾನ. ವಿಶ್ವ ವಿಶಾಲವಾಗಿದೆ.

ಮುಂದಾಳುಗಳು, ಯಜಮಾನರು "ರುದ್ರಾಭಿಷೇಕ ಮಾಡ್ರಯ್ಯ. ಪರ್ಜನ್ಯ ಜಪ ಮಾಡಿಸ್ರಿ. ವಿರಾಟಪರ್ವ ಓದಿಸ್ರಿ" ಎಂದರು. ಮಕ್ಕಳು, ಮೊಮ್ಮಕ್ಕಳು "ಭಾರೀ ಅಡಚಣಿ ಐತೆ" ಎಂದು ಬಸ್ಸು ಹತ್ತಿ ಸಿನಿಮಾ ನೋಡಲು ಹತ್ತಿರದ ನಗರಕ್ಕೆ ಎದ್ದರು

ಹೆಂಗೈತೆ ರಾಗಿ ? ಎಂದು ಈಗ ಕೇಳಿದರೆ

"ಬಲುರಾಗಿತ್ತಪ್ಪಾ, ಏನ್ಮಾಡ್ತಿ ಮಳೆ ಹ್ವಾಗೇ ಬಿಡ್ತು. ಇನ್ನೆಲ್ಲೆರಾಗಿ ? ಗಾಬು, ಗದ್ದೆಂಕೆ" ಎನ್ನುತ್ತಾರೆ.

ನನಗಂತೂ ಗೊತ್ತಿಲ್ಲ; ಇಂಡಿಯಾ ದೇಶದಲ್ಲಿ ವರ್ಷವೊಂದಕ್ಕೆ ಎಷ್ಟು ಮಿಲಿಯನ್ ಟನ್ ಆಹಾರಧಾನ್ಯ ಬೆಳೆಯುತ್ತದೆ ? ಅಷ್ಟು ಮಿಲಿಯನ್ ಪೈಕಿ ಅದೆಷ್ಟು ಮಿಲಿಯನ್ ಕಡಿಮೆ ಆಹಾರ ಬೆಳೆಯುತ್ತದೋ ಏನೋ ಈ ವರ್ಷ.

ನಮ್ಮೂರಿನಲ್ಲೇನೋ "ಗಾಬು, ಗದಿಗೆಂಕೆ" ಬೇಕಾದಷ್ಟು ಬೆಳೆಯುತ್ತದೆ. ಅದೆಷ್ಟು ಲಕ್ಷ ರೂಪಾಯಿಯೊ, ಖರ್ಚುಮಾಡುತ್ತಾರಂತೆ. ಎಷ್ಟು ಮಾಡಿದರೆತಾನೆ ಮಳೆ ಬರಲು ಸಾಧ್ಯ.

ಈ ನಡುವೆ ನಮ್ಮೂರಿಗೆ ಒಬ್ಬ ಸ್ಟ್ಯಾಟಿಸ್ಟಿಕಲ್ ಅಸಿಸ್ಟೆಂಟರು ಬಂದರು. ನಮ್ಮೂರಿನ ಸಂತೆಯಲ್ಲಿ ಮೆಣಸಿನಕಾಯಿ, ಉಪ್ಪು, ರಾಗಿ, ಜೋಳ, ಬಿಕ್ಕೇಹಣ್ಣು ಇತ್ಯಾದಿಗಳ ರೇಟು ಬರೆದುಕೊಂಡರು ಆಗಲೇ ನಮಗೆಲ್ಲಾ ಅನುಮಾನ ಬಂತು. ಇವನಿಗ್ಯಾಕೆ ಇದೆಲ್ಲಾ ಉಪದ್ವ್ಯಾಪ ಅಂತ. ಸಂಜೆ ಹೊತ್ತಿಗೆ ನಮ್ಮ ಸಿದ್ದಪ್ಪನ ಹತ್ತಿರ ಹೋಗಿ "ನಿನ್ನ ಜಮೀನು ಕಟಾವು ಮಾಡಿಸಲು ದುಡ್ಡು ಕೊಡುತ್ತೇನೆ, ಎಷ್ಟು ಉತಾರ ಬರುತ್ತದೆ ಎಂದು ನೋಡಿಕೊಳ್ಳಬೇಕು" ಎಂದ ಆತ.

"ಸ್ವಾಮಿ, ನನ್ನ ಹೊಲನ ನಾನು ಕೊಯ್ಕೊಗೊಂತಿನಿ. ನೀವ್ಯಾಕೆ ದುಡ್ಡು ಕೊಡ್ತೀರಿ. ಇದ್ರಗೆ ಏನೋ ಐತೆ" ಎಂದ ಸಿದ್ದಪ್ಪ. ರಾತ್ರೋ ರಾತ್ರಿ ಕೊಯ್ಲು ಗುತ್ತಿಗೆ ಕೊಟ್ಟು ಮರು ದಿನ ತೆನೆ ರಾಶಿ ಮಾಡಿಸಿದ. ಅಸಿಸ್ಟೆಂಟರು ಛೇರ್ಮನ್ ಮತ್ತು ಪೋಲೀಸ್ ಕುಮ್ಮಕ್ಕು ತಂದು ಆ ತೆನೆಗಳ ತೂಕ ಹಾಕಿಸಿದರು. ೨೪೨೦ ಚದರಗಜ ಭೂಮಿಗೆ 75 Kg. ತೂಕದ ತೆನೆ ಬಂತು. ಬಹುಶಃ 18 Kg. ಜೋಳ ಬರಬಹುದು. ಅದರಲ್ಲಿ 1.8 Kg. ಪ್ರೊಕ್ಯೂರ್ಮೆಂಟ್‌ಗೆ ಹೋದರೆ ಕೇವಲ 14520 ಚ. ಗ. ಭೂಮಿಯಿದ್ದ ಜನ ಏನು ಮಾಡಬೇಕು.

, ಮಿಶ್ರ ತಳಿ ಜೋಳ ಉತ್ತಮವಾದುದು. ಎಕರೆಗೆ 4 ಟನ್ ಗೊಬ್ಬರ ಬಿತ್ತಿದರೆ ಉತ್ತಮ ಪ್ರತಿಫಲ ದೊರೆಯುತ್ತದೆ ಎಂದು ಹೇಳಲಾಗುತ್ತಿದೆ. 4 ಟನ್ ಗೊಬ್ಬರ ಎಕರೆಗೆ ತೆಗೆದುಕೊಳ್ಳಬಲ್ಲ ಛಾತಿ ನಮ್ಮ ಸಿದ್ದಪ್ಪನಿಗಿರಲಿಲ್ಲವಲ್ಲ. ಪಕ್ಕದ ಹಳ್ಳಿಯ 404 ಎಕರೆ ಸಾಹುಕಾರರು ಕೇವಲ 20 ಎಕರೆಗೆ ಜೋಳ ಬಿತ್ತಿದ್ದರೆಂದು ಅಧಿಕಾರ ವರ್ಗದವರೂ ಒಪ್ಪಿದ್ದರಲ್ಲ ಏಕೆ ? ಎಂದು ಸಿದ್ದಪ್ಪನಿಗೆ ಹರಿಯುತ್ತಿಲ್ಲ.

ರಾಗಿ ಇದ್ದಿದ್ದರೆ ಜೋಳವನ್ನು ಸರ್ಕಾರಕ್ಕೆ ಮಾರಬಹುದಾಗಿತ್ತು. ಗಾಬು ಗದೆಗೆಂಕೆ ತಿನ್ನಬೇಕೇ ಈಗ. ಓಪನ್ ಮಾರ್ಕೆಟ್ಟಿನಲ್ಲಿ ದರ 88 ರೂ ಆಗಿರಬೇಕಾದರೆ ಪ್ರೊಕ್ಯೂರ್ಮೆಂಟು ಗೆಲ್ಲುವುದೆಂತು ಎಂಬುದೇ ನಮ್ಮೆಲ್ಲರಿಗೆ ಸಮಸ್ಯೆಯಾಗಿದೆ. ಆದರೆ ನಾವು ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಇಪ್ಪತ್ತು ಮೈಲಿಗೆ ಪ್ರೈವೇಟ್ ಬಸ್ಸಿನಲ್ಲಿ ಎಪ್ಪತ್ತೈದೇ ಪೈಸಾ ಛಾರ್ಜಿದ್ದರೂ, ಸಮಾಜ ವಾದದ ವಿಜಯಕ್ಕಾಗಿ ಒಂದು ರೂಪಾಯಿ ಹತ್ತು ಪೈಸಾ ಕೊಟ್ಟು ಸರ್ಕಾರಿ ಬಸ್ಸಿನಲ್ಲೇ ಪ್ರಯಾಣ.

ಈಗಲೀಗ ನಾವೆಲ್ಲ ಭಗವದ್ಭಕ್ತರಾಗಿದ್ದೇವೆ. ಭಜನೆ, ಪುರಾಣ, ಜಪ, ಹೋಮ ಅಭಿಷೇಕಗಳನ್ನು ಮಾಡಿಸುತ್ತಿದ್ದೇವೆ. ಜೋಯ್ಸರು, ಪುರೋಹಿತರುಗಳಿಗೆ ಉದ್ರಿ ಹೇಳಿದ್ದೇವೆ. ಎಂಬುದು ಬೇರೆ ಮಾತು.

ಊರಿನ ದೇವತೆಗಳಿಗೆಲ್ಲಾ ದೆಸೆ ಬರುವುದರ ಜೊತೆಗ ಕೋಪವೂ ಬಂದಿದೆ. ಕಳೆದ ಬಾರಿ ಮಳೆ ಹೋದಾಗ ಹೊಸ ಗುಡಿ ಕಟ್ಟಿಸಿಕೊಡುತ್ತೇವೆ, ಪಂಚ ಕಲಶ ಮಾಡಿಸಿ ಕೊಡುತ್ತೇವೆ ಎಂದೆಲ್ಲ್ಲ ನಾವು ಹರೆಸಿಕೊಂಡಿದ್ದೆವಲ್ಲಾ ಅದನ್ನು ಅವು ಮರೆತೇ ಇಲ್ಲ.

" ನೀವು ಕೊಟ್ಟ ಮಾತಿಗೆ ತಪ್ಪಿದಿರಿ. ಆದುದರಿಂದ ಬರುತ್ತಿದ್ದ ಮಳೆಯನ್ನು ನಾವು ತಡೆದು ನಿಲ್ಲಿಸಿದ್ದೇವೆ." ಎಂದು ಅಪ್ಪಣೆ ಕೊಡಿಸುತ್ತಿವೆ.

ಮೊನ್ನೆ ಮೊನ್ನೆ ಫುಡ್ ಆಫೀಸರುಗಳು ನಮ್ಮ ಪೇಟೆಯಲ್ಲಿ ಪ್ರೊಕ್ಯೂರ್ಮೆಂಟ್ ಮಾಡಿಬಿಡಲು ಜೋರಾಗಿ ಹೊರಟರು.

" ನಿಮಗೆ ಹತ್ತು ಚೀಲ ಜೋಳದ ಲೆವಿ ಅಲಾಟ್ ಆಗಿದೆ. ಕೊಟ್ಟುಬಿಡಿ " ಎಂದರು.

" ಚಿಂತಾಲು ತಂದು ತೂಕ ಮುಗಿಸಿ ಕೂಡಲೇ ಹೇರಿಸಿಕೊಂಡು ಹೋಗಿ" ಎಂದು ನಾವು ಹೇಳಿದೆವು, ಅವರ ಆಜ್ಞೆಯನ್ನು ನಾವು ವಿರೋಧಿಸಬಹುದೆಂದು ಅವರು ಊಹಿಸಿದ್ದರೋ ಏನೋ, ನಮ್ಮ ಉತ್ತರದಿಂದ ಅವರಿಗೆ ನಿರಾಶೆ ಆಯಿತು.

ಗುಮಾಸ್ತರನ್ನು ಕರೆಸಿ, ಇವರ ಜೋಳ ತೆಗೆಸಿಕೊಂಡು ಹೋಗಿ ಎಂದರು. ಗುಮಾಸ್ತರು ತಲೆ ಕೆರೆದುಕೊಳ್ಳುತ್ತಾ

" ಸಾರ್, ಚಿಂತಾಲು ಇಲ್ಲ, ತೂಕದ ಕಲ್ಲೂ ಇಲ್ಲ. ಹಮಾಲರಿಲ್ಲ..." ಎಂದರು.

ಆಫೀಸರು ರೇಗಿ "ಇನ್ನೂ ಏನೇನಿಲ್ಲ ಹೇಳಿ ? ನಿಮಗೆ ಕೊಕ್ಕೆ ಹಾಕುವುದೊಂದೆ ತಿಳಿದಿದೆ " ಎಂದರು.

" ತೆಗೆಸಿಕೊಂಡು ಹೋದ ಮಾಲು ಸ್ಟಾಕ್ ಮಾಡಲು ಗೋಡೌನ್ ಇಲ್ಲ. ಇವರಿಗೆ ಕೊಡಲು ದುಡ್ಡೂ ಅಲಾಟ್ ಆಗಿಲ್ಲ. "

ಆಫೀಸರು " ಯೋಚನೆ ಮಾಡೋಣ. ಮೊದಲು ನಮ್ಮ ಟಾರ್ಗೆಟ್ ರೀಚ್ ಮಾಡಬೇಕು " ಎಂದರು.

ನಾವು " ಅಗತ್ಯವಾಗಿ ಮಾಡಿ ಸ್ವಾಮಿ " ಎಂದೆವು. ಅವರು ನಮ್ಮೆಲ್ಲರ ಸಹಕಾರವನ್ನು ಕೋರುತ್ತಾ ಹೊರಟು ಹೋದರು,

ಅ. ರಾ. ಸೇ.

ಬಗೆ ಹರಿಯಿತು

ಆಕೆ—ಮೂದೇವಿಯಂತೆ ಮೂಲೆ ಕುರ್ಚಿಲಿ ಕೂತು
ಜಂತೆ ಎಣಿಸೆ ಚಿಂತೆ ಹರಿವುದೇ ?
ಎಂತಹ ಮಂಕರು ನೀವು !
ಆದರದಿ ಆಹ್ವಾನಿಸಿ ಅಳಿಯನ
ದೀಪಾವಳಿಗೆ ;
ಸಾದರದಿ ಕರೆಯಿರಿ, ಬರೆಯಿರಿ ಕಾಗದವ.

ಆತ—" ಅಷ್ಟವರ್ಷಭವೇತ್ಕನ್ಯ " ಕಾಲದಲಿ
ಆಚರಿಸಿದರು ಅಕ್ಕರೆಯಲಿ ಮಕ್ಕಳಿಗೆ
ಸಕ್ಕರೆ ದೀಪಾವಳಿ ;
ಅಷ್ಟಗಳು ನಾಲ್ಕು ಕಳೆದಿವೆ ಕುವರಿಗೆ,
ಮೂರರ ಮೇಲ್ಮೂವತ್ತಕೆ ಹಸೆಮಣೆ
ಹತ್ತಿದ ಹಸುಳೆಗೆಂತಹ ದೀಪಾವಳಿ ?
ನನಗೆ ಕಹಿಕೊಡುವ ತಾಪಾವಳಿ ?

ಆಕೆ—ಮೂವತ್ತಾಗಲಿ ಅರುವತ್ತಾಗಲಿ
ಮೂವತ್ತಾಗಲಿ ಅರುವತ್ತಾಗಲಿ
ಮುಂದ್ದಿನ ಮಂಗಳಲ್ಲವೆ ಅವಳು ?
ಸದ್ದಿಲ್ಲದೆ ಬರೆಯಿರಿ ಇಂದೇ
ದೂರದ ರೂರ್ಕೆಲಕೆ.
ಸುದ್ದಿ ತಲುಪಲು ಮೂರೊಪ್ಪತ್ತಾದೀತು !
ಸಿದ್ಧ ಮಾಡಲಿ, ಸ್ಲೀಪರು ಹಿಡಿಯಲಿ
ರೈಲಲಿ.

ಆತ—(ಸ್ವಾಗತ)
ನಾಲ್ಕು ಅಷ್ಟ ದಾಟಿದ ಮಗುವಿಗೆ,
ನಾಲ್ವತ್ತರ ಅಳಿಮಯ್ಯಗೆ, ಆರಣಿ
ಸಿಲ್ಕು ಸೀರೆ ಟೆರಿಲಿನ್ ಷರಟು

ಎಲ್ಲಿಂದ ತರಲಿ ? ಯಾರ ಕೇಳಲಿ ?
ಮದುವೆಯ ಸಾಲದ ಶಿಲ್ಕೇ
ಕೂತಿದೆ ಭೂತದಂತೆ–ಸೇಟಂಗಡಿಲಿ !

ಸಾಲದ ಹೇರನು ಹೊತ್ತ ಸೇತೂರಾಯ
ಓಲಗ ಬಾಣಿಗ ಚಾಕರಗೆ
ಅಳುತಳುತಲೆ ಆರ್ಡರ್ ಇತ್ತು,
ತೆಪ್ಪಗೆ ಕೂತ !

ಇಳಿದೇ ಮುಳುಗಿದಾತಗೆ
ಛಳಿಯೇನು ? ಮಳೆಯೆಲ್ಲಿ ?

ಬಂದಿತು ತಂತಿ ಅಳಿಯಂದಿರದು,
ಬೆಚ್ಚುತ ಬೆದರುತ ಬಿಚ್ಚಿದರು
ತಂದೆತಾಯಿಗಳು !
ಏನೋ ಎಂತೋ ! ಅದಾವ ಕೆಟ್ಟ ಸುದ್ದಿಯೋ !
(ತಂತಿಯೆಂದರೆ ಅವುದೋ ಭಯ
ಎಲ್ಲಿಲ್ಲದ ಚಿಂತೆ!)
" ವಂದನೆ ನಿಮಗೆ ಪ್ರೀತಿಯ ಕರೆಯೋಲೆಗೆ ;
ಆದರೆ—

ಸುಂದರಿಯಿಂದು ಮಲಗಿಹಳು
ಮೆಟರ್ನಿಟಿ ವಾರ್ಡೊಂದರಲಿ
ಕಂದ ಹುಟ್ಟಿದ—ಎಂಟುವರೆ ಪವುಂಡಿನ
ತುಂಟಪೋರ !
ತಂದೆಯಾದೆ ನಾನು–ಅಚ್ಚುಮೆಚ್ಚಿನ
ಅಜ್ಜಿ ತಾತ ನೀವು !
ತಂದಿತು ನಿಮಗೆ ದೀಪಾವಳಿಯು,
ಇದೊಂದು ಸರ್ಪ್ರೈಸ್ ಪ್ಯಾಕೆಟ್ಟನು !"

ಬಹು ಷಹಣೆ ರಾಯರ ಮೊಮ್ಮಗ !
ಬಹು ಸುಲಭದಿ ಬಗೆಹರಿಸಿದ,
ತಲೆ ತಿನ್ನುತ ಬಂದೊದಗಿದ
ರಾಯರ ಭಾರದ ಸಮಸ್ಯೆಯನು !

—ಟಿ. ಸುನಂದಮ್ಮ

ಪತ್ರವ್ಯವಹಾರ

(1)

ಸಂಪಾದಕರು
"ಜನಸಾಕ್ಷಿ" ಅವರಿಗೆ.

ಬೆಂಗಳೂರು
22-2-64

ಮಾನ್ಯರೆ,

ನಿಮ್ಮ 18-2-1964 ದಿನಾಂಕ ಪತ್ರಿಕೆಯಲ್ಲಿ, ಶ್ರೀಯುತ ಪ್ರಸನ್ನ ಅವರು ಬರೆದಿರುವ ಪತ್ರದಲ್ಲಿ, ಕಲ್ಲಳ್ಳಿಯಲ್ಲಿ ಈಗಿರುವ ಪ್ರೈಮರಿಶಾಲೆಗೆ ಕೇವಲ ನೂರು ಗಜಗಳಷ್ಟು ದೂರದಲ್ಲಿ ಹೊಯ್ಸಳರ ಕಾಲದ ಕ್ಯಾತೇದೇವರ ಗುಡಿಯ ಅವಶೇಷಗಳು ಈಗಲೂ ಇವೆ ಎಂದು ತಿಳಿಸಿದ್ದಾರೆ. ಸನ್ 1916 ರ ಆಗಷ್ಟ್ ತಿಂಗಳಲ್ಲಿ, ನಾನು ಹನ್ನೆರಡು ವರ್ಷದ ಬಾಲಕನಾಗಿದ್ದಾಗ, ಕಲ್ಲಳ್ಳಿಗೆ ಹೋಗಿದ್ದೆ ಪ್ರೈಮರಿ ಶಾಲೆ ಆಗ ತಾನೆ ಕಟ್ಟಿದ್ದರು. ಸುಣ್ಣಕೂಡ ಹೊಡೆದಿರಲಿಲ್ಲ, ಆದರೆ ಆ ಶಾಲೆಗೂ, ಹೊಯ್ಸಳರ ಕಾಲದ್ದೆಂದು ಪ್ರಸನ್ನರು ಹೇಳುವ ಕ್ಯಾತದೇವರ ಗುಡಿಯ ಅವಶೇಷಗಳಿರುವ ಸ್ಥಳಕ್ಕೂ, ಮುನ್ನೂರು ಗಜಗಳಷ್ಟು ದೂರಕ್ಕೂ ಜಾಸ್ತಿ ಇದೆ, ನಾನೇ ಅಳತೆ ಮಾಡಿದ್ದೇನೆ. ಈ ಒಂದು ಸಣ್ಣ ಲೋಪವನ್ನು ಶ್ರೀ ಪ್ರಸನ್ನರು ತಿದ್ದಿಕೊಳ್ಳುವರೆಂದು ನಂಬಿದ್ದೇನೆ.

ಇತಿ. ನಿಮ್ಮವ
ಕರಡಿ ಉಗ್ರಸೇನರಾವ್

(2)

ಸಂಪಾದಕರು
"ಜನಸಾಕ್ಷಿ" ಅವರಿಗೆ.

ಬರಡೆಹಕ್ಲು
28-2-64

ಮಾನ್ಯರೆ,

ನಿಮ್ಮ 24-2-64 ರ ಪತ್ರಿಕೆಯಲ್ಲಿ ಶ್ರೀಮಾನ್ ಕರಡಿ ಉಗ್ರಸೇನರಾಯರು ಬರೆದಿರುವ ಪತ್ರವನ್ನು ಓದಿ ತುಂಬಾ ಸಂತೋಷವಾಯ್ತು. ಆ ಪತ್ರದ ದಿಟ್ಟತನವು, ಸುಪ್ರಸಿದ್ಧ ಸಂಶೋಧಕರೂ, ಮತ್ತು ಸಾಹಿತಿಗಳೂ ಆದ ಶ್ರೀಯುತರ ಘನತೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ಮನುಷ್ಯ ಸಹಜವಾದ ಮರವೆಯಿಂದ ಮಾನ್ಯರು ಒಂದು ಅತ್ಯಲ್ಪವಾದ ತಪ್ಪನ್ನು ಮಾಡಿದಹಾಗಿದೆ. ಮಾನ್ಯರ ಪಪ್ಪಾಬ್ದಿ

ಯಿಂದ ಪ್ರಕಟವಾದ ಅವರ ಸಂಕ್ಷಿಪ್ತ ಜೀವನ ಚರಿತ್ರೆಯ ಪ್ರಕಾರ ಶ್ರೀ ಕರಡಿ ಉಗ್ರಸೇನರಾಯರು ಸ. 1903 ರ ಮಾರ್ಚಿ ತಿಂಗಳಲ್ಲಿ ಜನಿಸಿ ಸ. 1916 ರ ಆಗಸ್ಟ್ ತಿಂಗಳಲ್ಲಿ ಅವರಿಗೆ ಹದಿಮೂರು ವರ್ಷಗಳು ತುಂಬಿದ್ದವು. ಈ ಅಲ್ಪವಾದ ಲೋಪವನ್ನು ಶ್ರೀಯುತರು ಗಮನಿಸಿ, ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ.

"ಮಕರಂದ"

(3)

ಸಂಪಾದಕರು
ಜನಸಾಕ್ಷಿ ಅವರಿಗೆ.

ಬೆಂಗಳೂರು
8-3-1964

ಮಾನ್ಯರೆ,

ನಿಮ್ಮ 3-3-1964 ರ "ಜನಸಾಕ್ಷಿ" ಯಲ್ಲಿ ಬರೆದಿರುವ ಶ್ರೀಯುತ ಮಕರಂದರ ಪತ್ರ ಓದಿ ತುಂಬಾ ಬೇಸರವಾಯ್ತು. ಮಾನ್ಯ ಶ್ರೀ ಕರಡಿ ಉಗ್ರಸೇನ ರಾಯರು ತಮ್ಮ ಪತ್ರಗಳನ್ನು ತಮ್ಮ ಸ್ವಹಸ್ತದಿಂದಲೇ ಬರೆಯ ಬೇಕಾದ ಹೀನ ಸ್ಥಿತಿಯಲ್ಲಿರದೆ, ಅವುಗಳ ವ್ಯವಹಾರವನ್ನು ತಮ್ಮ ನಿಪುಣ ಕಾರ್ಯದರ್ಶಿಗಳ ಜವಾಬ್ದಾರಿಗೆ ಬಿಟ್ಟಿರುವುದು ಶ್ರೀ ಮಕರಂದರಿಗೆ ತಿಳಿಯದೇ ಇರುವುದು ತುಂಬಾ ಶೋಚನೀಯ.

ಇಂತಿ
"ಸುಮಿತ್ರ."

(4)

ಸಂಪಾದಕರು
ಜನಸಾಕ್ಷಿ ಅವರಿಗೆ

ಹಳ್ಳಿಕೊಪ್ಪ
12-3-1964

ಮಾನ್ಯರೆ,

ಶ್ರೀಯುತ/ಶ್ರೀಮತಿ ಸುಮಿತ್ರ ರವರು ನಿಮ್ಮ 8-3-1964 ರ ಪತ್ರಿಕೆಯಲ್ಲಿ ಪ್ರಕಟಿಸಿರುವ ಪತ್ರವನ್ನು ಓದಿದರೆ, ಶ್ರೀಯುತ/ಶ್ರೀಮತಿ ಸುಮಿತ್ರರು, "ಮಕರಂದ" ರನ್ನು ಒಬ್ಬ ಪುರುಷರೆಂದು ಭಾವಿಸಿರುವ ಹಾಗಿದೆ. ಇದಕ್ಕಿಂತಲೂ ಘೋರವಾದ ತಪ್ಪನ್ನು ಯಾರೂ ಮಾಡಲಾರರು. "ಮಕರಂದ" ರು ಮತ್ಯಾರೂ ಆಗಿರದೆ, ಹೆಸರಾಂತ ಶಿಶುಸಾಹಿತ್ಯ ಲೇಖಕಿ ಸಂತಬಾಳೂರು ಕಾಮಾಕ್ಷಮ್ಮನವರು. ಶ್ರೀಮತಿ ಕಾಮಾಕ್ಷಮ್ಮನವರು ರಮ್ಯವಾದ ಬರಡೆ ಹೊಳೆ ತೀರದಲ್ಲಿರುವ ತಮ್ಮ ರಮ್ಯ ಕುಟೀರದಿಂದ ಮನೋಹರವಾದ ಶಿಶುಸಾಹಿತ್ಯವನ್ನು ಪ್ರಪಂಚಕ್ಕೆ ಒದಗಿಸುತ್ತಿವುದು ಶ್ರೀಯುತ/ಶ್ರೀಮತಿ ಸುಮಿತ್ರರವರಂತಹ ಜನರಿಗೆ ತಿಳಿಯದೇ ಇರುವುದು ವಿಷಾದಕರ.

"ನೊಂದವ"

(5)

ಸಂಪಾದಕರು ಜನಸಾಕ್ಷಿ ಅವರಿಗೆ

ಹಾಗಲಕೊಪ್ಪ 19-3-1964

ಮಾನ್ಯರೆ,

15-3-1964 ರ ಜನಸಾಕ್ಷಿ ಪತ್ರಿಕೆಯಲ್ಲಿ "ನೊಂದವರು" ಬರಡೆ ಹೊಳೆಯನ್ನು ರಮ್ಯವೆಂದು ವರ್ಣಿಸಿದ್ದಾರೆ. ನನಗೂ ಬರಡೆ ಹೊಳೆಗೂ ತುಂಬಾ ನಿಕಟ ಸಂಬಂಧವಿದೆ. ನಿಜಸ್ಥಿತಿ ಹೇಳಬೇಕಾದರೆ, ಬರಡೆ ಹೊಳೆ-ಹೊಳೆಯಾಗಿರುವುದೆಲ್ಲಾ ಕೆಲವು ಸಣ್ಣ ಬಚ್ಚಲುಗಳ ಪ್ರವಾಹದಿಂದ. ಬರಡೆಹೊಳೆ ಪ್ರಸಿದ್ಧಿಯಾಗಿರುವುದೆಲ್ಲಾ ಕೆಲವು ವರ್ಷಗಳ ಹಿಂದೆ ಅದರ ದಡದಲ್ಲಿ ಒಬ್ಬ ಲೈಸೆನ್ಸಿಲ್ಲದ ರೈತಾಳು ಒಂದು ಕಾಡು ಹಂದಿಯನ್ನು ಗುಂಡಿಕ್ಕಿಕೊಂದನೆಂಬ ಪ್ರಸಂಗದಿಂದ ಮಾತ್ರವಲ್ಲದೆ ಬೇರೇನೂ ಇಲ್ಲ.

ಇಂತಿ

"ಸಮದರ್ಶಿ"

(6)

ಸಂಪಾದಕರು ಜನಸಾಕ್ಷಿ ಅವರಿಗೆ

ಪಡುವಲದಿಣ್ಣೆ 27-3-1964

ಮಾನ್ಯರೆ,

ನಿಮ್ಮ 29-3-1964 ರ ಪತ್ರಿಕೆಯಲ್ಲಿ, ಶ್ರೀ "ಸಮದರ್ಶಿ" ಯವರು ಬರೆದಿರುವ ಪತ್ರವನ್ನು ಓದಿದರೆ ಅವರ ದುರಭಿಮಾನವು ವ್ಯಕ್ತವಾಗುತ್ತದೆ. ಬರಡೆ ಹೊಳೆಯಂತೀರದಲ್ಲಿ ಕೆಲವು ವರ್ಷಗಳಹಿಂದೆ ಕಾಡುಹಂದಿಯನ್ನು ಗುಂಡಿಕ್ಕಿಕೊಂದವರು ಲೈಸೆನ್ಸಿಲ್ಲದ ರೈತಾಳಲ್ಲ. ಊರಿನ ಪಟೇಲರ ಮಗನೇ, ಲೈಸೆನ್ಸ್ ಸಹಿತವಾದ ಫಾರೆನ್ ಮೇಕ್ ಡಬ್ಬಲ್ ಗನ್ನಿನಿಂದ, ಹೋಳೀ ಹಬ್ಬದ ಆಚರಣೆಯ ಅಂಗವಾಗಿ ಷಿಕಾರಿ ಮಾಡಿದ ಪ್ರಸಂಗವನ್ನು ಈ ರೀತಿ ವರ್ಣಿಸುವುದು ಕುಚೋದ್ಯ. ಈಗಿನ ಕಾಲದಲ್ಲಿ ಜನರಲ್ಲಿ ರೈತಬಾಂಧವರ ಬಗ್ಗೆ ತುಂಬಾ ತುಚ್ಛ ಭಾವನೆಯಿರುವುದು, ನಮ್ಮ ದೇಶದ ಭವಿಷ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಬೇಕಾಗಿದೆ.

"ಪ್ರಿಯದರ್ಶಿ"

(7)

ಸಂಪಾದಕರು ಜನಸಾಕ್ಷಿ ಅವರಿಗೆ

ಮೂಡಲ ದಿಣ್ಣೆ 3-4-1964

ಮಾನ್ಯರೇ,

ನಿಮ್ಮ 29-3-1964 ರ ಪತ್ರಿಕೆಯಲ್ಲಿ ಪ್ರಕಟವಾದ "ಪ್ರಿಯದರ್ಶಿ" ಯವರ ಪತ್ರವನ್ನು ಓದಿದರೆ, ಪ್ರಾಯಶಃ ನಮ್ಮನಾಡಿನ ಜನರಿಗೆಲ್ಲ ರೈತಬಾಂಧವರ ಬಗ್ಗೆ ತುಚ್ಛಬಾವನೆ ಇರುವುದೆಂಬ ಸಂಶಯ ಮೂಡುತ್ತದೆ. ಆದರೆ ನಮ್ಮನಾಡಿನ ಬೆನ್ನು

ಮಂಜೊಳೆಯುತ್ತಿರುವ ರೈತಬಾಂಧವರ ಬಗ್ಗೆ ಪರಮ ಪೂಜ್ಯ ಮನೋಭಾವವನ್ನಿಟ್ಟು ಕೊಂಡಿರುವ ಜನರೂ ನಮ್ಮನಾಡಿನಲ್ಲಿ ಸಾಕಷ್ಟು ಇದ್ದಾರೆ ಅಂತ "ಪ್ರಿಯದರ್ಶಿ" ಯವರಿಗೆ ತಿಳಿಸೋಣವೆ ? ಬಡ ಬೋರೇಗೌಡನ ಬಗ್ಗೆ "ಪ್ರಿಯದರ್ಶಿ" ಗಳಿಂ ಎಚ್ಚರಿಕೆಯಿಂದಿರಲಿ.


ಇಂತಿ.

"ದೂರದರ್ಶಿ"

[ಈ ಪತ್ರವ್ಯವಹಾರವನ್ನು ಇಲ್ಲಿಗೆ ಮುಕ್ತಾಯ ಗೊಳಿಸಲಾಗಿದೆ. ಇದನ್ನು ಶುರುಮಾಡಲು ಅವಕಾಶವನ್ನು ಏಕೆ ಕಲ್ಪಿಸಿದೆವೋ ನಮಗೇ ತಿಳಿಯದಾಗಿದೆ. ಸಂ. ಜ. ಸಾ.]

[ನಾವೂ ಹಾಗೆಯೇ—ಸಂ.]

—" ಕೇಫ "



ವ್ಯಾಟಿಕನ್‌ನಲ್ಲಿ ರೋಮನ್ ಕ್ಯಾಥೊಲಿಕ್ ಜಗದ್ಗುರು ಪೋಪರು ಹಲವಾರು ನೂತನ ಮಾರ್ಪಾಡುಗಳನ್ನು ಮಾಡಲಿರುವರಂತೆ.

ಹಳೆಯ ಕಂದಾಚಾರದ ಕೆಲವು ನಿಯಮಾವಳಿಗಳನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಮಾರ್ಪಡಿಸಲೆತ್ನಿಸುತ್ತಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಈ ಮಾರ್ಪಾಡುಗಳಲ್ಲಿ ಸ್ತ್ರೀಸಂತರ ಉಡುಪುಗಳು ಸೇರಬಹುದಂತೆ.

ಮೀನಕಣ್ ಹೆಣ್ಣುಗಳು

ಮತ್ಸವಿಲ್ಲದ ಊಟ ವಂಗರಿಗೆ ರುಚಿಸುಲ್ಲ.
ಮೀನ ಮೆದ್ದಿರಲೊಮ್ಮೆ ಹರಿಯ ಬೇಡಿದರು.
“ ಓ ಮತ್ಸ್ಯಾವತಾರಿ ! ದಯಮಾಡಿ,·ಕೃಪೆದೋರು.
ದೇಹದಲ್ಲಿ ಕಾಣುವೆಡೆ ಮೀನ ಅಂಕಿತ ನೀಡು ”

“ ಕಂಡಾಗ ನಮ್ಮನ್ನು ಗುರುತಿಸುವರಾಗ
ಮೀನ ಭಕ್ತರು ಇವರು. ಭುಂಜಕರು ಎಂದು.
ನಮ್ಮ ಪ್ರವರವನಾಗ ಹೇಳಬೇಕಿಲ್ಲ.
ನಮ್ಮ ನೋಡಿದರಾಗ ಪರಿಚಯವು ಸುಲಭ. ”

ಸೃಷ್ಟಿ ಕರ್ತನ ಕಂಡು ಹರಿಯು ಹೇಳಿದನು.
“ ಓ, ಬೊಮ್ಮ ! ಹೀಗಂತ ವಂಗೀಯರಂದರು ”
ಇನ ಮುಂದೆ ವಂಗರನು ಅಚ್ಚು ಇಳಿಸಿಡುವಾಗ
ಅವರ ಬೇಡಿಕೆಯ ಮರೆಯದಿರಯ್ಯ ” ಎಂದ

“ ಅಂತೇ ಆಗಲಿ ಜೀಯ ! ” ಎಂದ ಬೊಮ್ಮ
ಅಂದಿನಿಂದಲೆ ಅವ, ವಂಗ ರಮಣಿಯರ
ಕಣ್ಣ, ಮೀನಿನಂತೆಯೇ ತಿದ್ದಿ ತೀಡಿದ.
ವಂಗ ಚೆಲುವೆಯರೆಲ್ಲ ಇಂದು ಮೀನಾಕ್ಷಿಯರು !

—ಹ. ನ. ವೇಣು

ದಿ ಯುನೈಟೆಡ್ ಮುಳ್ಳೂರ್

ಹೆಗಲಿನ ಮೇಲೆ ಕೈಯಿಕ್ಕಿಕೊಂಡು, ಕಿವಿಯಿಂದ ಕಿವಿಯ ತನಕ ಹಲ್ಲು ಕಿರಿಯುತ್ತಾ ಇಷ್ಟು ಅನ್ಯೋನ್ಯವಾಗಿ ಬರುತ್ತಿರುವ ಈ ಜೋಡಿ ಯಾವುದು ಎಂದು ಕಣ್ಣು ಉಜ್ಜಿ ಕೊಂಡು ನೋಡಿದೆ. ಮನೋ ಭ್ರಾಂತಿಯೋ ಎಂದು ಮೈ ಚಿಗುಟಿ ನೋಡಿದೆ. ಇಲ್ಲ ಬೆತ್ತಲೆ ಸತ್ಯವೇ ಮೈವೆತ್ತು ನಿಂತಿತ್ತು. ಮುಳ್ಳೂರಿನ ಶಾನುಭೋಗ್ ಶಿಂಗ್ರಯ್ಯ ಮತ್ತು ಪಟೇಲ್ ಮುಳ್ಳೂರಯ್ಯನವರು ಹೆಗಲಿಗೆ ಹೆಗಲು ಕೂಡಿಸಿ ಬರುತ್ತಿದ್ದರು. ಮುಳ್ಳೂರಯ್ಯನ ಕೈಲಿ ಭುಜದಮಟ್ಟಕ್ಕಿದ್ದ ಹಲಸಿನ ಮರದ ವಾಕಿಂಗ್‌ಸ್ಟಿಕ್ಕು, ಶಿಂಗ್ರಯ್ಯನ ಕೈಲಿ ಜಿಂಕೆಮಾರ್ಕಿನ ಛತ್ರಿ ರಂಜಿಸುತ್ತಿತ್ತು. ಇಬ್ಬರೂ ಕೆರೆ ಏರಿಯ ಮೇಲೆ ವಾಕಿಂಗ್ ಹೋಗುತ್ತಿದ್ದರು. ಈ ಎಣ್ಣೆ ಸೀಗೆಕಾಯಿಗಳು ಹೀಗೆ ಇಜ್ಜೋಡಿನಂತೆ ಐಕ್ಯಗೊಂಡುದರ ಐತಿಹ್ಯವೇನು ಎಂದು ನನಗೆ ತಿಳಿಯಲಿಲ್ಲ.

ಪಾರ್ಕಿನಲ್ಲಿ ಕಿವಿಗೆ ಕಿವಿ ಜೋಡಿಸಿ, ಸಲ್ಲಾಪಿಸುತ್ತಿದ್ದ ಜೋಡಿಯನ್ನು ನೋಡಿ ನಾನು ಮೂಗಿನ ಮೇಲೆ ಬೆರಳಿಟ್ಟುಕೊಂಡೆ. ಪುಡಾರಿ ಶರಭಣ್ಣ, ಮುನಿಸಿಪಲ್ ಮೆಂಬ್ರು ಖಂಡೇರಾಯರು ತಾಜಾವಿಷಯವನ್ನು ಬಲು ಅನ್ಯೋನ್ಯವಾಗಿ ಚರ್ಚಿಸುತ್ತಿದ್ದುದು ತಿಳಿದು ಬಂತು. ಎಲ ಎಲಾ ಏನಿದು ಮೋಜು. ಮುಳ್ಳೂರಿನಲ್ಲಿದ್ದ ದ್ವೇಷಾಸೂಯೆಗಳೆಲ್ಲಾ ಮಾಯವಾದುವೆ? ಐಕ್ಯಮತ್ಯ ಜನರಲ್ಲಿ ಮೂಡಿತೆ ? ಇದು ಸತ್ಯವೇ ಮಿಥ್ಯವೇ ? ಇತ್ಯಾದಿ ಪ್ರಶ್ನೆಗಳು ಆವಿರ್ಭವಿಸಿದುವು.

ಅಳಲೇಕಾಯಿ ಪಂಡಿತ ಅನಂತರಾಮಯ್ಯನನ್ನು ಅಲೋಪತಿಕ್ ವೈದ್ಯಶಿಖಾಮಣಿ, ಗುರುರಾಯರು ಅಪ್ಪಿಕೊಂಡಿರುವ ಭಂಗಿ ವಿತಂತು ಸಾತಕ್ಕ ಪೋನಿಟೇಲಿನ ಪ್ರಮೀಳೆಯೊಂದಿಗೆ ಹಿತವಾಗಿ ಹರಟುತ್ತಿದ್ದ ದೃಶ್ಯ ಇವೆಲ್ಲವೂ ನನ್ನನ್ನ ದಿಗ್ಮೂಢನನ್ನಾಗಿಸಿತು. ಈ ಮೈತ್ರಿಯ ಮರ್ಮವೇನು ? ಈ ಅಪೂರ್ವ ದೃಶ್ಯಗಳ ಒಳ ರಹಸ್ಯವೇನು ಎಂಬುದನ್ನು ತಿಳಿಯಲು ಕಾತುರನಾದೆ.

ಹಂಟರ್ ವೆಂಕಟಪ್ಪನವರ ಕೂಟ ಚರ್ಚಿಸಿದರೆ ಇದೆಲ್ಲವೂ ತಿಳಿಯುತ್ತೆ ಎಂದುಕೊಂಡು ನಾನು ಅವರ ಮನೆಯ ಕಡೆಗೆ ನಡೆದೆ. ಆಗಲೆ ಸಂಜೆ ಕತ್ತಲು ಆವರಿಸಿತ್ತು. ವೆಂಕಟಪ್ಪನವರು ತಮ್ಮ ಜೋಡು ನಳಿಗೆ ಕೋವಿಗೆ ಎಣ್ಣೆ ತೀಡುತ್ತಾ ಕುಳಿತಿದ್ದರು.

ನನ್ನನ್ನ ಕಂಡು "ದಯಮಾಡಿಸ್ಬೇಕು. ಬಾಳದಿನವಾಗೋಯ್ತು ತಮ್ಮನ್ನ ಕಾಣ ದೇಯೇ......" ಎಂದು ಹೇಳಿ, ಆಗ್ಲೇ ಹಾಸಿದ್ದ ಜಮುಖಾನೆಯ ಕಡೆಗೆ ಕೈಹಾಯಿ ಸಿದರು.

"ಏನು ಎಂಕ್ಟಪ್ಪನವರೇ ಸಮಾಚಾರ ? " ಎಂದೆ ನಾನು ಜಮುಖಾನೆಯಮೇಲೆ ತಳವೂರುತ್ತ, "ಎಲ್ಲಾ ಯಥಾಪ್ರಕಾರ ಐತೆ...." ಎಂದರು ಅವರು ಏನೂ ಆಗೇ ಇಲ್ಲವೋ ಎಂಬಾತೆ.

"ಒಳ್ಳೆ ಹೇಳಿದ್ರಿ. ಅಲ್ರೀ ಶತ್ರುಗಳು ಬಂದು ಬಾಂಬೆಸೀತಿದಾರೆ. ನಮ್ಮ ವರು ಬಾರ್ಡರ್‌ನಲ್ಲಿ ಕಾದಾಡ್ತಿದ್ದಾರೆ. ನೀವು ಈರಣ್ಣನಹಾಗೆ ಇಲ್ಲಿ ಕೂತು ಏನೂ ಆಗಿಲ್ಲ ಅಂತಿದ್ದಿರಲ್ಲಾ ಒಳ್ಳೆಚೆನ್ನಾಗಿದೆ..." ಅಂತನಾನು ಖಾರವಾಗಿ ಚುಚ್ಚಿದೆ.

ಅವರು ಒಂದು ಬಾರಿ ವಿಚಿತ್ರವಾಗಿ ನಕ್ಕರು. ಅದು ಉಡಾಫೆಯ ನಗೆಯೂ ಆಗಿರಬಹುದು ಅಥವಾ ಉದಾಸೀನದ ನಗೆಯಾಗಿರಲಿಕ್ಕೂ ಸಾಕು. ನಂತರ ಒಂದು ಬಾರಿ ರೈಫಲ್ಲಿನ ಬೋಲ್ಟನ್ನು ಎಳೆದು ಹತ್ತಿಯಿಂದ ಎಣ್ಣೆಯನ್ನು ಅದ್ದಿಕೊಂಡು ಸವರುತ್ತಾ ಹೇಳಿದರು.

"ಇಷ್ಟೆಲ್ಲಾ ನೀವು ಗಾಬ್ರಿ ಬಿದ್ರೆ ಕಥೆ ಮುಗಿದೇ ಓಯ್ತು. ಇದೊಂದು ಯುದ್ಧನೇನ್ರಿ.... ? "

"ಮತ್ತೆ ಇನ್ನೇನಿದು.... ? "

"ಲಡಾಯಿ ಅಂತ ಏಳಲಿಕ್ಕೂ ಬರ್ವಲ್ಲದು. ಬೆಕ್ಕು ಜಗಳ ಕಾಯಂಕ್ಕಿಲ್ವ ಅಂಗೈತೆ. ಅಲ್ರೀ ಯುದ್ಧ ಅಂದ್ರೆ ಅದಕೊಂದು ಅಂತಸ್ತು, ರೂಲೀಸು ಬ್ಯಾಡ್ವೇ ನ್ರಿ... ? "

"ಅದಕ್ಕೆಂತಾರೂಲ್ಸು... ನಿಮ್ಮದು ವಿಚಿತ್ರವಾಗಿದೆ... " ಎಂದೆ ನಾನು ವ್ಯಂಗ ವಾಗಿ ನಗುತ್ತಾ.

"ಯುದ್ಧ ಅಂದ್ರೆ ಎದುರೆದುರಿಗೆ ಬರ್ಬೇಕು. ಖಾಡಾಖಾಡಿ ಒಡೆದಾಬೇಕು ಇಲ್ಲ ಗೆಲ್ಬೇಕು, ಇಲ್ಲ ಸೋತು ಕಂಬಳಿ ಮುಖಕ್ಕೆ ಒದ್ಕೊಂಡು ಒಂಟೋಗ್ಬೇಕು. ಅದ್ಬುಟ್ಟು ಅತ್ತೆ ಮ್ಯಾಲಿನ ಕ್ವಾಪಾ ತೊತ್ತೀ ಮೇಕೆ ತೋರದ್ರು ಅಂತ, ಸಿವಿಲ್ ಜನಗಳ್ ಮ್ಯಾಕೆ ಬಾಂಬು ಆಕೋಕೆ ಬರೋದ... ? ನಮ್ಮ ಮಿಲಿಟರಿಯೋರ ತಾವು ಖಾಡಾ ಖಾಡಿ ಮಾಡ್ಲಿಕ್ಕೆ ಕೈನಾಗೆ ಅರಿನೀಲ್ಲ ಈಮುಕ್ಕಳ್ಗೆ... " ಎಂದು ಎಂಕ್ಟಪ್ಪ ನವರು ಚಾಟಿಯಿಂದ ಹೊಡೆದಂತೆ ಹೇಳಿದರು.

ಎಂಥಹವರಿಗಾದರೂ ಕಾವೇರಿಸುವ ಪರಿಸ್ಥಿತಿಯೇ. ಶತ್ರುಗಳು ಮಾಡುವುದು ಅಂತ ನಾಮರ್ಧಾ ಕೆಲಸವೇ. ಎಂಕ್ಟಪ್ಪನವರ ಬಾಯಲ್ಲಿ ಬಂದ ಹದಿನಾರಾಣೆ ಸತ್ಯವನ್ನು ನಾನು ಒಪ್ಪಿಕೊಂಡೆ.

"ಅಲ್ಲಾ ಎಂಕ್ಟಪ್ಪನೋರೆ ಸಿವಿಲಿಯನ್ಸ್ ಮೇಲೆ ಬಾಂಬುಹಾಕಿ ಅಥವಾ ಏರ್ ರೈಡ್ ಮಾಡಿ ಹೆದರಿಸಿದರೆ ಅವರುಗಳು ಹೆದರ್ಕೊಂಡು ದೇಶದಲ್ಲಿ ಅಲ್ಲೋಲಕಲ್ಲೋಲವಾಗಿ, ಸುಲಭವಾಗಿ ತಾವು ಜಯಿಸಬಹುದು ಅಂತ ಶತ್ರುಗಳು ನಂಬಿದ್ದಾರೆ. ..."

"ಅದ್ಕೆ ನಾನು ಅವಕ್ಕೆ ತಲೆ ಕೆಟ್ಟೈತೆ ಅಂತ ಹೇಳಿದ್ದು, ಈ ಏರ್‌ರೈಡ್ ಗೋಳಿಂದ ನಮ್ಮ ಸಿವಿಲ್ ಮಂದಿ ಎಂಗೆ ಎಚ್ಚೆತ್ಕೊಂಡವ್ರೆ ಗೊತ್ತೈತಾ .. ? ನೀವೇ ನೋಡಿರ್ಬೋದು, ಊರ್ನಾಗೆ ಎಂಗೆ ಒಗ್ಗಟ್ಟು ಬಂದೈತೆ ಅಂತ... "

"ನನಗೆ ಈಗ ಅರ್ಥವಾಯ್ತು. ಓಹೋ ಇದಕ್ಕೋಸ್ಕರಾನೋ, ಶಿಂಗ್ರಯ್ಯ ಮುಳ್ಳೂರಯ್ಯ ಎಲ್ರೂ ಒಂದಾಗಿರೋದು... " ಎಂದೆ ನಾನು.

"ಮಂತೆ ಊರ್ಗೆ ಊರೆ ಒಗ್ಗಟ್ಟಾಗೋಗೈತೆ. ಆಕ್ಟರ್ ಚೆನ್ನಪ್ಪನೋರು ಅವರ ಪಟಾಲಂ ಸೇರ್ಕೊಂಡಿ, ಬೆನ್‌ಫಿಟ ಆಕಿ ಡಿಫೆನ್ಸ್ ಫಂಡ್‌ಗೆ ಅಣ ಎತ್ತತವ್ರೆ. ಕರೀಸಂತೆ ಕಳ್ಳ ಬಸವ ಕೂಡ ಸೀಮೆ ಎಣ್ಣೇನ ಅಳೇ ರೇಟಿಗೆ ಮಾರ್ತವ್ನೆ. ಶಿಂಗ್ರಯ್ಯನೋರು, ಮುಳ್ಳೂರಯ್ಯನೋರು ಮೇಲುಸ್ತುವಾರಿ ನೋಡ್ಕೋಳ್ಳಿಕ್ಕೆ ನಿಂತವ್ರೆ. ಇಂಗೆ ಎಲ್ರೂ ರೆಡಿಯಾಗ್ಬುಟ್ಟವ್ರೆ. ಅಣಾ ಬೇಕಾ, ಇಲ್ಲ ಸೈನ್ಯಕ್ಕೆ ಜನಾಬೇಕಾ ಅಂತಾ ಊರಿಗೆ ಊರೇ ಕೇಳ್ತಾಐತೆ ... "

"ಶಹಬಾಷ್ ... ಶಹಬಾಷ್ .... ಪರ್ವಾಗಿಲ್ಲ ನಮ್ಮ ಮುಳ್ಳೂರು ಏನೋ ಅಂತಿದ್ದೆ ... " ಎಂದೆ ನಾನು.

"ಉಸ್ತಾದ್ ಕೆಂಚಪ್ಪ, ಅವನ ಶಾಗಿರ್ದುಗೋಳು ರಕ್ತಾನ ಲೀಟರ್ಗಟ್ಲೆ ಕೊಡೋಕೆ ತಯಾರಾಗವ್ರೆ...."

"ವೆರಿಗೂಡ್, ಅದ್ಸರಿ ಅಂದ್ರೆ ನಿಮ್ಮ ಪಾತ್ರವೇನು ಇದರಲ್ಲಿ ... ? "

"ನಂದೇನೈತೆ ಬರೀ ಅಳಿಲ ಸೇವೆ ಅಷ್ಟೇಯೆ ... "

"ಆದ್ರೂ ನಿಮಗೊಂದು ಪೋರ್ಟ್ ಪೋಲಿಯೋ ಇರ್ಲೇಬೇಕಲ್ಲ ... "

ಐತೆ. ಈ ಟೇಮಿನಾಗೆ ಎಲ್ಲರ ಸೇವೆಯೂ ಬೇಕಾಗೈತೆ, ಈ ಸತ್ರುಗಳು ಅವರಲ್ಲಿ, ಈ ಅಲ್ಕ ಮಂದಿ. ಪ್ಯಾರಾ ಟ್ರೂಪಗೋಳ್ ಬುಟ್ಟು ಊರ್ನಾಗೆ ಗಲಬೆ ಎಬ್ಸಿ ಜನಗೋಳನ್ನ ನರಮ ಮಾಡ್ಲಿಕ್ಕೆ ಅತ್ತವ್ರೆ. ಅಂಥೋರನ್ನ ಇಡ್ದು ಬೊಕ್ಕೀಗೆ

ಆಕೋದು ನನ್ನ ಕೆಲಸ ... " ಎಂದು ನುಡಿದು ಎಂಕ್ಟಪ್ಪ ಕೋವಿಯ ಬೋಲ್ಟನ್ನು ಬಂದು ಮಾಡಿ. ಎರಡು ನಳಿಗೆಗೂ ಎರಡು ತೋಟಾವನ್ನು ತುಂಬಿ, ಕುಳಿತಲ್ಲಿಂದಲೇ ಹೆದೆಯೇರಿಸಿದರು.

"ಅವರುಂಗಳು ನಿಮ್ಮ ಕೈಗೆ ಸಿಕ್ಕಾರ್ಕೆ ಎಂಕ್ಟಪ ನೋರೇ. ಎಲ್ಲಿ ನುಗ್ಗಿ ತಲೆ ಮರೆಸಿಕೊಂಡಿರುತ್ತೊ್ವ ಮುಂಡೇವು ... " ಎಂದೆ ನಾನು.

"ಈ ಊರ್ನಾಗೆ ಮರಸಿಕೊಳ್ಳೋಕ್ಕೆ ತಾವಿದ್ರೆ ತಾನೇನ್ರಿ. ಸುಡುಗಾಡ್ನಾಗೆ ತಾತಾಚಾರಿ, ಈರಭದ್ರ ಇಬ್ರೂನೂವೆ ಗಸ್ತು ತಿರುಗ್ತಾವ್ರೆ. ದೊಂಗಣ್ಣ ಬಾಬು ಗಳು ಅವರ ಪಟಾಲಂ ಊರ್ನಾಗೆ ಕೇರಿ ಕೇರಿನೆಲ್ಲಾ ಬೀಟ್ ಮಾಡ್ತಾವ್ರೆ. ನಾನು ಅಂಟರ್ ಆಗಿರೋದ್ರಿಂದ ಕಾಡ್ನಾಗೆಲ್ಲಾ ರೌಂಡ್ ಅಕ್ತಿವ್ನಿ. ಇನ್ನೆಂಗ್ರ ತಲೆ ಮರ ಸೋಕ್ತಾರೆ. ಅದೂ ಅಲ್ದೆಯೇ ಅವು ಬಂದಿರೋ ಕೆಲ್ಸ ಏನು. ಊರ್ನಾಗೆ ಬಾಂಬು ಗೀಂಬು ಎಸ್ದು ಗಲಾಟೆ ಮಾಡ್ಲಿಕ್ಕಲ್ಲವ್ರ. ಅಂಗೆ ತಲೆ ಮರ್ಸ್ಕೊಂಡು ಸುಮ್ಕೆ ಕುಂತ್ರೆ ಆಯ್ತದಾ ? "

"ಅದ್ನರಿಯೇ ಸಬೊಟೇಜ್ ಮಾಡೋದು ತಾನೇ ಅವರ ಉದ್ದಿಶ್ಯ ... "
"ಆಗ ಎಂಗಿದ್ರು ಒರಗೆ ಬರುತ್ವೆ ಮುಂಡೇವು. ನನ್ನ ಕೈಗೆ ಅಂಗೆ ಸಿಕ್ಕು ಬಿದ್ದಾಗ ಇಂಗೆ "ಡುಂ" ಅಂತ ಗುಂಡು ಆಕ್ಬುಡ್ತೀನಿ ..." ಎಂದು ಹೇಳುತ್ತಿದಂತೆ ಅವರ ಬಂದೂಕದಿಂದ ಭಯಂಕರ ಶಬ್ದ ಹೊರಟಿತು. ಆಶಬ್ದಕ್ಕೆ ಇಡಿ ವೆರಾಂಡವೇ ನಡುಗಿತು, ಹಾಕಿದ್ದ ಜಮಖಾನೆ ಪತರ ಗುಟ್ಟಿತು. ಗುಂಡಿನ ಶಬ್ದವನ್ನು ಮೀರಿಸಿದ ಆರ್ತನಾದವೊಂದು ದೂರದಿಂದ ಕೇಳಿಸಿತು. ನಾನೊಮ್ಮೆ ಎಂಕ್ಟಪ್ಪನನ್ನು ನನ್ನನ್ನು ಮತ್ತು ಅವನ ಶುನಕನನ್ನು ನೋಡಿಕೊಂಡೆ. ಯಾರಿಗೂ ಏನೂ ಅಪಾಯವಾಗಿರಲಿಲ್ಲ. ಆದರೆ ಸುಮಾರು ಮುನ್ನೂರು ಗಜ ದೂರದ ತೋಟದಲ್ಲಿ ವ್ಯಕ್ತಿಯೊಂದಕ್ಕೆ ಗುಂಡಿ ನೇಟು ಬಡಿದಿತ್ತು. ಅದರ ಹತ್ತಿರ ಸ್ಟೆನ್ ಗನ್ನು, ಟಾಮಿ ರೈಫಲ್ಲೇ, ಕೈಬಾಂಬುಗಳು, ಜೀವವಿದ್ದ ತೋಟಾಗಳು ದೊರೆತವು. ಚಕೋರ ಚಂದ್ರ ಅದರ ಮೇಲೊಂದು ನಕ್ಷತ್ರದ ಗುರುತಿರುವ ಪಟ್ಟಿಯೊಂದು ಅದರ ತೋಳನ್ನು ಸುತ್ತಿತ್ತು.

—ಕೆ. ಎನ್. ಕಿಟ್ಟೆನ್.

ಮರು ನಾಮಕರಣವಾಗಲಿ

ಅಯ್ಯಾ ಸಂಪಾದಕ ಮಹಾಶಯರೆ,

ಸತ್ಯ ಬೆಂಡೆಯನ್ನು ಹಗಲಲ್ಲಿ ಹೊತ್ತವರೂ, ಮೈದಾನಿನಂಥ ವಿಶಾಲ ಹೃದಯಿಗಳೂ ಆದ ನಿಮ್ಮಲ್ಲಿ ಅಲ್ಲದೆ ಇನ್ನಿತರ "ಮಂಗ್ರ್ ಕಾದಿಲ್" ಉಳ್ಳವರಲ್ಲಿ ಹೇಳಿ ಪ್ರಯೋಜನವಿಲ್ಲೆಂದು ಬಲವಾಗಿ ನಂಬಿ ಈ ಪತ್ರವನ್ನು ಬರೆಯುವ ಸಾಹಸಮಾಡಿದ್ದೇನೆ. ನಿಮ್ಮ ಮೂಲಕ ಜನತಾಜನಾರ್ಧನಿಗೂ ತಲಪಬೇಕೆಂದು ಆಶಿಸುತ್ತೇನೆ.

ಗ್ರಾಮದಾನಿ ಗುಲ್ಲೂರಿನಲ್ಲಿ ಇತ್ತೀಚೆಗೆ ಸಕ್ಕರೆ ಸಿಗುವುದು ತುಂಬಾ ಕಷ್ಟತಮವಾಗಿದೆ. ಸಕ್ಕರೆ ರೋಗವಿದ್ದರೂ ಸಕ್ಕರೆ, ಸಕ್ಕರೆಯಿಂದ ಮಾಡಿದ ಸಿಹಿ ತಿನ್ನುವುದನ್ನು ನಾವು ಬಿಡದಿರುವುದು "ಛಲದಂಕಮಲ್ಲತನಕೆ ಉತ್ತಮ ನಿದರ್ಶನವಾಗಿದೆ. ಹೆಮ್ಮೆಯ ಸಂಗತಿ. ಮೇಲೆ ಹೇಳಿದ ಸತ್ಯ ಸಂಗತಿಯಲ್ಲಿ ಸದ್ಯ ನನ್ನ ಆಕ್ಷೇಪವೇನೂ ಇಲ್ಲ. ಆದರೆ ಅಂಥ ಸಿಹಿತಿಂಡಿಯ ಹೆಸರನ್ನು ಕೇಳಿದಾಗ ಮಾತ್ರ ಉಂಗುಷ್ಟದಿಂದ ನೆತ್ತಿಯ ಕೂದಲಿನ ಕೊನೆಯ ತನಕ ಸಿಟ್ಟೇರುತ್ತದೆ. (ಯಾವ ಪ್ರಜಾಪ್ರಭುತ್ವ ಪ್ರೇಮಿಗೂ ಆಗುವ ಅನುಭವ ಇದು.) ಅದೇ ಮೈಸೂರು ಪಾಕ್. ತುಪಾಕಿಗಳು ಚಾಕುಗಳಿಂದ ಭಾರತೀಯರ ಕುತ್ತಿಗೆ ಕೊಯ್ಯುವ ಹಂಚಿಕೆ ಹಾಕುತ್ತಿರುವಾಗ ಈ ಸಿಹಿಯನ್ನು ತಿನ್ನಬಹುದೆ ? ತಿಂದರೂ ಇದಕ್ಕೆ ಆ ಹೆಸರು ಯೋಗ್ಯವೆ ? ಆ ಹುಚ್ಚು ದಗಾಕೋರರ ಊರಿನ ರಾಜ್ಯದ ಹೆಸರನ್ನು ಮೈಸೂರಿನೊಡನೆ ಬೆರಸಬೇಕೇ ? "ಮೈಸೂರು ಪಾಕ್" ಎನ್ನುವುದರ ಬದಲು "ಸಿಹಿಕರ್ಣಾಟಕ" ಎಂದು ಮರುನಾಮಕರಣ ಮಾಡಬೇಕು.

ಹಾಗೆಯೇ ! "ಮಾವೋದೋಸೆ" ಎಂದು ಮಾವೋವಿನ ಕಿವಿಗಳಷ್ಟಗಲದ ದೊಡ್ಡ ದೋಸೆಗಳನ್ನು ಮದ್ರಾಸು ಕಡೆ ಮಾಡುತ್ತಾರೆ. "ಮಾವೋವನ್ನು" ಅರೆದು ಮಾಡಿದ ದೋಸೆ. ಪರವಾಯಿಲ್ಲ. ತಿನ್ನಿ, ಎಂದು ತಂಬಿ ಚಿನ್ನವೀರನ್ ಹೇಳಿ ನನ್ನ ಹೊಟ್ಟೆ ತುಂಬಿಸಿದ್ದೂನು ನನಗೆ ಸಮಾಧಾನವಾಗಿಲ್ಲ. ನಿಮಗೂ ಆಗಲಾರದು. "ಪಾಕು" "ಮಾವೊ" "ಚೌ ಚೌ" ಇ_ಇ ಹೆಸರುಗಳನ್ನು ಕೇಳಿ ಸುಮ್ಮನಿರುವಷ್ಟು ತಾಳ್ಮೆ ನಮ್ಮಲ್ಲಿ ಉಳಿದಿಲ್ಲ, ಅವರು ಉಳಿಯುವಂತೆ ನಡೆದು ಕೊಳ್ಳಲಿಲ್ಲ. ಹೋಟೇಲು ಮಾಲೀಕರು, ಸಾರ್ವಜನಿಕರು ಈ ವಿಷಯದಲ್ಲಿ ತುರ್ತುಕಾರ್ಯ ಕೈಕೊಂಡು ಯೋಗ್ಯ ಮರು ನಾಮಕರಣ ಮಾಡಿ ಮುಂದಾಗಲಿರುವ ಮುಂದಾಳುಗಳ ಚಳವಳಿ, ಗೋದಲಗಳನ್ನು ತಪ್ಪಿಸಬೇಕು.

ಜೈ ಹಿಂದ್.

ಈ ದೇಶದ ಗಾಳಿಯನ್ನೇ ಉಚ್ಛ್ವಾಸಿಸಿ, ನಿಶ್ವಾಸಿಸುತ್ತಿರುವ ನಿಮ್ಮೆಲ್ಲರ ವಿಶ್ವಾಸಿ.

ಕಿರಣ ಗುಲ್ಲೂರು

ಅಗಲೇ ಶುರುವಾಯ್ತು

★

ಎಷ್ಟು ಅದ್ಧೂರಿ ಮದುವೆ ಅಂತೀರಿ! ಏನೆಲ್ಲಾ ವೈಭವ! ಗಂಡು ಹೆಣ್ಣು ಎಷ್ಟು ಚೆಂದ ಕಾಣಿಸುತ್ತಿದ್ದರು ಅಂತ? ಕೈತುಂಬಾ ಸಂಬಳ ತರುವ ಓದಿದ ಗಂಡು. ಮೈ ತುಂಬಾ ಒಡವೆಹಾಕಿಕೊಂಡಿರುವ ಓದಿದ ಹೆಣ್ಣು. ಇಬ್ಬರೂ ರೂಪುವಂತರೇ ಹೌದು. ಎರಡೂ ಕಡೆಯವರೂ ಶ್ರೀಮಂತರು. ಅಂದಮೇಲೆ ವಿಜೃಂಭಣೆ ಕೇಳಬೇಕೆ?

ಊರಿಗೆ ಊರೇ ಬಂದಿತ್ತು. ಬರುವವರೆಲ್ಲಾ ಏನನ್ನಾದರೂ ಕೈಯಲ್ಲಿ ಹಿಡಿದು ಕೊಂಡೇ ಬರುತ್ತಿದ್ದರು. ಗಂಡಿನ ಕೈ ಕುಲುಕಿ ಶುಭವಾಗಲಿ ಅಂತ ಮಾತ್ರ ಹೇಳಿ ಹೋದವರೇ ಇಲ್ಲ. ಕೈಕುಲುಕಿ, ಏನನ್ನಾದರೂ ಕೈನಲ್ಲಿ ತುರುಕಿ ಶುಭಾಶಯ ಹೇಳುವವರೇ ಇದ್ದರು. ಇಲ್ಲ ಹೆಣ್ಣಿಗೆ ಕೈಮುಗಿದು ಏನನ್ನಾದರೂ ಕೊಡುವರು. ಅಥವಾ ಗಂಡಿಗೆ ಉಡುಗೊರೆ ಕೊಡುವವರು; ಹೀಗೆ ಬಂದ ಮಂದಿ ತಮ್ಮ ತಮ್ಮ ಪರಿಚಯ ನನ್ನು ಮಾಡಿಕೊಡುತ್ತಿದ್ದರು.

ಆರತಕ್ಷತೆಯೂ ಸಂಜೆ ಸಾಂಗವಾಗಿ ನೆರವೇರಿತು, ಮಧ್ಯಾಹ್ನ ಧಾರೆಗೆ ಕೂತಿದ್ದ ಹೆಣ್ಣೇ ಸಂಜೆ ಆರತಕ್ಷತೆಗೆ ನಿಂತಿತ್ತು ಅಂತ ನಂಬೋದೆ ಕಷ್ಟವಾಗಿತ್ತು. ಧಾರೆಗೆ ಕೂತ ಹೆಣ್ಣು ನಮ್ಮೂರಿನ ಚೆಲುವೆ. ಆದರೆ ಸಂಜೆ ನಿಂತಿದ್ದ ಹೆಣ್ಣು ಸಿನಿಮಾ ತಾರಿಣಿಯಂತಿದ್ದಳು. ಗಂಡು ಹಾಗೆಯೇ. ಮಧ್ಯಾಹ್ನ ದೊಸ್ಸ ಬುಸ್ಸ ಪಂಚೆ ಯುನ್ನುಟ್ಟು ಎಲ್ಲಿ ಬಿಚ್ಚಿ ಹೋಗುತ್ತೊ ಅಂತ ಉಡಿಯ ಮೇಲಿನ ಕೈಯನ್ನ ಬಿಡದೆ ಹಿಡಿದುಕೊಂಡಿದ್ದ ಆ ಗಂಡು ನಮ್ಮೂರು ಚೆಲುವನೇ! ಆದರೆ ಸಂಜೆ ಆರತಕ್ಷತೆಗೆ ನಿಂತಿದ್ದವ, ಥೇಟ್ ವಿಲಾಯ್ತಿಯಿಂದ ಆಗತಾನೆ ಇಳಿದುಬಂದಿದ್ದ ಯೂರೋಪಿಯನ್ ನವ ಮೋಹನಾಂಗ!

ಒಬ್ಬನ್ನೊಬ್ಬರು ನೋಡುವುದು! ಇಬ್ಬರೂ ಬಂದವರನ್ನು ನೋಡಿ ಮಾತ ನಾಡುವುದು. ಆ ಮೇಲೆ ಪಿಸು ಪಿಸು ಮಾತನಾಡಿಕೊಳ್ಳುವುದು! ಎಲ್ಲವನ್ನೂ ಕಂಡವರು ಈ ದಂಪತಿಗಳು ಹೂವಿನಂತೆ ಹಗೂರಾಗಿ ಬಾಳನಡೆಸುತ್ತಾರೆ. ಎಂದೆಂದು ಕೊಳ್ಳುವರೇ!

ಮೂರು ದಿನಗಳು ಮದುವೆಯ ಸಡಗರ. ಬಂದಿದ್ದವರು ಊರಿಗೆ ಹಿಂತಿರುವ ಗಲಾಟೆ. ನಾಲ್ಕನೆಯ ದಿನ ಮಧ್ಯಾಹ್ನವೇ ಗಂಡು ಹೆಣ್ಣಿಗೆ ಸ್ವಲ್ಪ ಬಿಡುವು.

ಇಬ್ಬರೂ ಕೊರಡಿಗೆ ಹೋಗಿ ಕೂತರು. ಗಂಡು ಕಾಗದ ಪೆನ್ಸಿಲ್ ಹಿಡಿದು ಸಿದ್ಧನಾದ. ಹೆಣ್ಣು ಉಡುಗೊರೆಯ ಒಂದೊಂದು ವಸ್ತುವನ್ನೂ ತೆಗೆದುಕೊಂಡು ಇಂತಹವರು ಕೊಟ್ಟಿದ್ದು. ಇಂತಹವರಿಗೆ. ಅವರವಿಳಾಸ ಹೀಗೆ ಎಂದು ಹೇಳುವುದು. ಹೆಣ್ಣು ಹೇಳಿದ್ದನ್ನು ಗಂಡು ಬರೆದು ಕೊಳ್ಳುವುದು. ಇದೇ ಕಾರ್ಯಕ್ರಮ. ಉಡುಗೊರೆ ಕೊಟ್ಟವರಿಗೆಲ್ಲಾ ಗಂಡು ಹೆಣ್ಣು ಸಹಿಹಾಕಿ ಧನ್ಯವಾದಗಳ ಪತ್ರವನ್ನು ಬರೆಯಬೇಕು ಎಂದು ಮೊದಲೇ ಆಲೋಚಿಸಿದ್ದರು. ಪಟ್ಟಿ ದೊಡ್ಡದಾದರೂ ಒಂದೆರಡು ದಿನಗಳಲ್ಲಿ ಮುಗಿಸಬೇಕು, ರಾತ್ರಿ ನಿದ್ರೆ ಕೆಟ್ಟರೂ ಪರವಾಗಿಲ್ಲ, ಬೇಗ ಧನ್ಯವಾದ ಕಾಗದಗಳನ್ನು ಕಳಿಸಬೇಕು ಎಂದು ಪ್ರಯತ್ನ. ಮೊದಲ ನಾಲ್ಕು ಉಡುಗೊರೆಗಳ ಪೆಟ್ಟಿಗೆಯಲ್ಲಿ ಕೊಟ್ಟವರ ವಿಳಾಸವಿತ್ತು. ಚಿ। ರಾ। ಗಂಡಿಗೆ ಅಥವಾ ಚಿ। ಸೌ। ಅವಳಿಗೆ ಅಂತ ಬರೆದ ಚೀಟಿಯೂ ಇತ್ತು.

"ಶಾಮರಾಯರು ಯಾರ್ರಿ ! ನಿಮಗೇನು ಸಂಬಂಧ" ಎಂದು ಹೆಣ್ಣು ಕೇಳುವುದು. "ನಮ್ಮಪ್ಪನ ಕಕ್ಷಿಗಾರ್ರು, ಮಿನಾ ! ಮೂರು ದಶಕಗಳ ಸ್ನೇಹ" ಎಂದು ಗಂಡು ವಿಶದೀಕರಿಸುತ್ತಿತ್ತು.

"ಬೆಳ್ಳಿ ಬಟ್ಟಲು, ಸೋದರತ್ತೆ ನಂಜಕ್ಕ. ಹೆಬ್ಬಿಗುಂಬ್ಬಾಲೆ ಅಂದೆಯಲ್ಲೇ ಯಾರಿಗೆ ಸೋದರತ್ತೇ ? ನನ್ನ ಸೋದರತ್ತೆ ಹೆಬ್ಬಿಗುಂಬ್ಬಾಲೆಯಲ್ಲಿ ಯಾರೂ ಇಲ್ಲವಲ್ಲ ಎಂದು ಗಂಡು ಕೇಳಿತು. ಬರೆದು ಕೊಳ್ಳುವುದನ್ನು ನಿಲ್ಲಿಸಿ, ಹೆಣ್ಣನ್ನೇ ದೃಷ್ಟಿಸಿ ನೋಡುತ್ತಾ.

"ನನ್ನ ಸೋದರತ್ತೆ, ಅಂದ್ರೆ; ಹೆಬ್ಬಿಗುಬ್ಬಾಲೇಲಿ ತುಂಬಾ ಸ್ಥಿತಿವಂತರು. ನನ್ನ ಕಂಡರೆ ಮೊದಲಿನಿಂದಲೂ ತುಂಬಾ ಪ್ರೀತಿ" ಎಂದು ಹೆಣ್ಣು ಹೇಳುವುದು. "ಅದ್ಯಾಕೆ ನಿನ್ನ ಮೇಲೆ ಅಷ್ಟು ಪ್ರೀತಿ. ನಿನ್ನ ಜತೆಗೆ ಸಾಲಾಗಿ ಆರು ಹೆಣ್ಣು ಮಕ್ಕಳಿವೆ, ಎಲ್ಲರನ್ನೂ ಕಂಡರೆ ಪ್ರೀತಿ ಇಲ್ಲವೇ ?" ಎಂದು ಗಂಡು.

"ಯಾಕೆ ? ಅವರಿಗೆ ಸ್ವಂತ ಮಕ್ಕಳಿಲ್ಲವೇ ". ಗಂಡು ಮುಂದುವರಿಯಿತು.

ಇಲ್ಲದೆ ಏನು ! ಮೂರು ಗಂಡು ಮಕ್ಕಳು ಅವರಿಗೆ", ಹೆಣ್ಣು.

"ಏನು ಮಾಡಿಕೊಂಡಿದ್ದಾರೋ ಗಂಡು ಮಕ್ಕಳು" ಗಂಡು ಕೇಳಿತು.

"ಮೊದಲನೆಯವ ರಾಮ ಅಂತ. ಎರಡನೆಯವ ಭೀಮ ಅಂತ ಮೂರನೆಯವ ಚಾಮಿ ಅಂತ. ಎಲ್ಲರೂ ಇಂಜನಿಯರಿಂಗ್ ಪ್ಯಾಸುಮಾಡಿ ಇಲ್ಲಿ ಅಲ್ಲಿ ಉತ್ತರದಲ್ಲಿ ಕೆಲಸದಲ್ಲಿದ್ದಾರೆ" ಹೆಣ್ಣಿನ ಉತ್ತರ.

"ಯಾರದೂ ಜಾತಕ ಸರಿಬರಲಿಲ್ಲವೇನೇ " ಎಂದು ಗಂಡು ಕೇಳಿತು. ಕುಹಕ ಮತ್ತು ತುಸು ಜಿಗುಪ್ಸೆ ಸೇರಿದ ದನಿಯಲ್ಲಿ ಕೇಳಿತು.

"ಸರಿ ! ಮೂವರಿಗೂ ಮದುವೆ ಆಗಿ ಮೂರು ಮೂರು ಮಕ್ಕಳಿವೆ. ನನ್ನ ಜಾತಕ ಯಾಕೆ ನೋಡ್ಬೇಕು " ಎಂದಿತು ಹೆಣ್ಣು. ನಿಕೃಷ್ಟದ ದನಿ.

"ಅದಕ್ಕೇನೇ ಅಷ್ಟು ಸ್ಥಿತಿವಂತರು ಬರಿ ಬೆಳ್ಳಿಬಟ್ಟಲನ್ನು ಕೊಟ್ಟಿರು ಅಂತ ಕಾಣುತ್ತೆ " ಗಂಡಿನ ಮೂದಲಿಸುವ ದನಿ.

"ಸಾಲಾಗಿ ಆರು ಜನ ಇದ್ದೀವಿ, ಎಲ್ಲರಿಗೂ ಸಮನಾಗಿ ಕೊಡಬೇಕಲ್ಲ. ಅದೂ ಈಗಿನ ಕಾಲದಲ್ಲಿ " ಹೆಣ್ಣಿನ ಸಮಾಧಾನದ ನುಡಿ.

"ಸ್ಸರಿ ! ಮುಂದೆ" ಎಂದಿತು ಗಂಡು.

ಇನ್ನೊಂದು ಉಡುಗೊರೆ ತೆಗೆದುಕೊಂಡಿತು ಹೆಣ್ಣು.

"ಇಲೆಕ್ಟ್ರಿಕ್ ಲ್ಯಾಂಪ್ ! ಹೆಸರಿನ ಚೀಟಿ ಇಲ್ಲ. ವಿಳಾಸ ಮೊದಲೇ ಇಲ್ಲ. ಯಾರು ಕೊಟ್ಟಿರಬಹುದು ? ನನ್ನ ಸ್ನೇಹಿತೆ ಲೀಲಾ ಇರಬೇಕು ! " ಎಂದಳು ಹೆಂಡತಿ.

"ಎಲ್ಲಿ ಕೊಡು ! ಆ ಲ್ಯಾಂಪನ್ನ" ಅಂತ ಅದನ್ನಿಸುಕೊಂಡು ಗಂಡ ನೋಡಿದ.

"ಓಹೋ ! ಇದನ್ನು ಶ್ರಿಂಗಯ್ಯಂಗಾರಿ ನನಗೆ ಕೊಟ್ಟಿರಬೇಕು. ಒಂದುಸಲ ನಾವಿಬ್ಬರೂ ಅಂಗಡಿಯಲ್ಲಿ ಇಂತಹುಗಳನ್ನು ಕಂಡಾಗ ಚೆನ್ನಾಗಿದೆ ಎಂದು ಹೇಳಿದ್ದೆ. ಅದನ್ನು ಜ್ಞಾಪಕದಲ್ಲಿಟ್ಟುಕೊಂಡು ಹಾಗೆ ಅವ ಕೊಂಡು ಕಳಿಸಿರಬೇಕು, ಎಷ್ಟು ಮಮತೆಯೋ ಅವನಿಗೆ, ನನ್ನ ಕಂಡರೆ" ಎಂದ ಗಂಡ.

ಲ್ಯಾಂಪ್ ಷೇಡಿನ ಮೇಲೆ ಕಮಲದ ಹೂ ಇದೆ ನೋಡಿ, ಅದೇ ತರಹ ಹೂವು ಹಾಕಿದ್ದ ದಿಂಬಿನ ಚೀಲವನ್ನು ಲೀಲಳಿಗೆ ಕೊಟ್ಟಿದ್ದೆ. ಅದಕ್ಕೇ ಅವಳು ಅದೇ ಮಾದರಿ ಇರುವ ಲ್ಯಾಂಪ್ ಷೇಡನ್ನು ನನಗೆ ಕೊಟ್ಟಿರಬೇಕು, ತುಂಬಾ ಒಲವಿನ ಹುಡುಗಿ ಲೀಲಾ" ಎಂದಳು ಹೆಂಡತಿ.

"ಲೀಲಾ ಹತ್ತಿರದಲ್ಲೇ ಇದಾಳಲ್ಲ ! ನಾಳೆ ಬೆಳಿಗ್ಗೆ ಹೋಗಿ ಕೇಳಿಕೊಂಡು ಬಂದುಬಿಡು " ಎಂದ ಗಂಡ.

"ಚೆನ್ನಾಯ್ತು, ಅಂದ್ರೆ ! ಈ ಲ್ಯಾಂಪ್ ಷೇಡ್ ನೀನು ಉಡುಗೊರೆಯಾಗಿ ಕೊಟ್ಟಿಯೇನೆ ಎಂದು ಹೇಗೆ ಕೇಳ್ತೋದ್ರೀ ! ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರು ಅಂತ ಗಾದೆ ಹೇಳಿದಹಾಗೆ," ಎಂದು ಅದರ ಬದಲು ನೀವೆ ಶಿಂಗ್ರಯ್ಯಂಗಾರನ್ನ ಕೇಳಿ, ನೀನೇನಪ್ಪಾ. ಆ ಕಮಲದ ಚಿತ್ರ ಇರೋ ಲ್ಯಾಂಪ್ ಷೇಡ್ ಕೊಟ್ಟಿದ್ದು ಅಂತ" ಎಂದು ತಿರುಗುಬಾಣ ಹಾರಿಸಿದಳು ಹೆಂಡತಿ.

ಹೋಗ್ಲಿ ಬಿಡು, ಅದನ್ನ ಅಲಾಯ್ದಾ ತೆಗೆದುಬಿಡು. ಹೆಸರು ವಿಳಾಸ ಇರೋ ಉಡುಗೊರೆಗಳನ್ನೆಲ್ಲಾ ಮೊದಲು ವಿಂಗಿಸೋಣ. ಆಮೇಲೆ ಗುರ್ತು ಸಿಗದೇ ಇರುವ ಉಡುಗೊರೆಗಳ ತನಿಖೆ ನಡೆಸೋಣ" ಎಂದ ಗಂಡ.

ಯಾಕಾದರೂ ಈ ಕೆಲಸಕ್ಕೆ ಶುರು ಮಾಡಿದೆವೋ ! ಇದರ ಬದಲು ಚಕ್ಕಂದ ಆಡಿಕೊಂಡು ಯುಗ ಯುಗಗಳನ್ನು ಕ್ಷಣಕ್ಷಣಗಳಂತೆ ಕಳೆಯ ಬಹುದಾಗಿತ್ತಲ್ಲ ! ಅದನ್ನು ಬಿಟ್ಟು, ಸಮಾಜದ ಸೌಜನ್ಯದ ನಡವಳಿಕೆ ಅಂತ ಅಂದು ಕೊಂಡು ಈ ಮಂಕು ಕೆಲಸಕ್ಕೆ ತೊಡಗಿದೆನಲ್ಲ ಎಂದು ಗಂಡ ನೊಂದುಕೊಂಡ. ಹೆಂಡತಿಗೂ ಹಾಗೆಯೇ ಅನ್ನಿಸುತ್ತಿತ್ತು. ಆದರೆ ಸ್ತ್ರೀಸಹಜವಾದ ನಾಚಿಕೆಯಿಂದಾಗಿ ತೋರಿಸಿ ಕೊಳ್ಳಲಿಲ್ಲ.

ಉಡುಗೊರೆಗಳ ಪಟ್ಟಿ ಮುಂದುವರೆಯಿತು. ಹೆಸರು ವಿಳಾಸ ಇದ್ದ ಉಡು ಗೊರೆಗಳನ್ನು ತೆಗೆದುಕೊಂಡು, ಬರೆಸಹತ್ತಿದ್ದಳು, ಹೆಂಡತಿ.

"ಎಷ್ಟು ಚೆನ್ನಾಗಿದೆ ನೋಡಿ ಅಂದ್ರೆ. ಇದು; ಥಳ ಥಳ ಅಂತ ಪೆಟ್ಟಿಗೇನೆ ಹೊಳಿತಾ ಇದೆಯಲ್ರೀ ! ಯಾರೋ ಸಂಜೀವರಾಯ, ಮೈಲಾಪುರ, ಮಂದರಾಸು ಅಂತ ವಿಳಾಸ ಬರೆದಿದೆಯಲ್ರೀ ! ಯಾರ್ರೀ ಅವರು" ಎಂದು ಕೇಳಿದಳು ಹೆಂಡತಿ.

ಪೆಟ್ಟಿಗೆ ತೆಗೆದುಕೊಂಡು ನೋಡಿದ ಗಂಡ. ಬಿಚ್ಚಿನೋಡಿದ. ಕ್ಷೌರದ ಪೆಟ್ಟಿಗೆ. ನನ್ನ ಸೋದರ ಮಾವ ಕಣೆ ಅವರು. ಉಬ್ಬು ಹಲ್ಲಿನ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಬೇಕು ಅಂತಿದ್ರು. ನಮ್ಮಮ್ಮನಿಗೆ ಆ ಸಂಬಂಧ ಒಪ್ಪಿತ್ತು. ನಾನು ಊಹ್ಞೂ ಅಂದೆ. ಅದಕ್ಕೇ ಕ್ಷೌರದ ಕತ್ತಿಕೊಟ್ಟು ತಲೆ ನುಣ್ಣಗೆ ಮಾಡಿಕೊಂಡು ಬಾಳಿಕೊ ಅಂತ ಉಡುಗೊರೆ ಕೊಟ್ಟಿರಬಹುದು ಎಂದು ಗಂಡ ಹೇಳಿದ.

"ಅದಕ್ಕೇ ಅವರು ಮದುವೆಗೆ ಬರದೇ, ಉಡುಗೊರೆಯನ್ನು ಅಂಚೆಮೂಲಕ ಕಳುಹಿಸಿದ್ದು !" ಎಂದು ಹೆಂಡತಿ ಹೇಳಿದಳು.

"ಹಾಗಲ್ಲ ಕಣೆ, ನಮ್ಮ ಸೋದರ ಮಾವ ಅಷ್ಟು ಕೆಟ್ಟವನಲ್ಲ. ಅವರ ಮಗಳಿಗೆ ಇವತ್ತು ಮದುವೆ, ಮದ್ರಾಸಿನಲ್ಲಿ. ಅದಕ್ಕೇ ಬರಲಿಲ್ಲ" ಎಂದು ಗಂಡ ಹೇಳಿದ.

"ಹುಬ್ಬುಹಲ್ಲು ಹುಡುಗೀನ ಯಾರು ಒಪ್ಪಿಕೊಂಡರೋ ? ಎಂದಳು ಹೆಂಡತಿ; ತನ್ನ ಹಲ್ಲುಗಳನ್ನು ತುಟಿಗೆ ತಾಕಿಸಿ ತೋರಿಸುತ್ತಾ.

"ಯಾರೋ ಮಂಡ್ಯದ ಹುಡುಗನಂತೆ. ಐ.ಎ.ಎಸ್ ಪ್ಯಾಸುಮಾಡಿದ್ದಾನಂತೆ ಕೃಷ್ಣಮೂರ್ತಿ ಅಂತಲೇ ಏನೋ ಹೆಸರಂತೆ," ಎಂದ ಗಂಡ.

"ಏನಂದಿರಿ ? ಮಂಡ್ಯದ ಕೃಷ್ಣಮೂರ್ತಿ ಅಂದಿರಾ ?" ಎಂದಳು ಹೆಂಡತಿ.

"ಹ್ಞೂ ಕಣೆ ವಿನಾನಾ! ಅವನ ಪರಿಚಯ ಉಂಟೆ ನಿನಗೆ" ಕೇಳಿದ ಗಂಡ.

"ಹೋದವರುಷ ನನ್ನ ನೋಡುವುದಕ್ಕೆ ಅಂತ ಬಂದಿದ್ದ, ತಂದೆತಾಯಿಯರ ಜತೆಯಲ್ಲಿ. ಲಕ್ಷಣವಾಗೇನೋ ಇದ್ದ. ನಗುಸರಸಿ ತರಹ ಮಾತಾಡ್ತಾ ಇದ್ದ. ಚೆನ್ನಾಗಿ ಕೇಸರಿಭಾತು, ವಾಂಗೀಭಾತು ತಿಂದ. ನಗ್ತ ನಗ್ತಾ ಹೊರಟು ಹೋದ. ಅಪ್ಪ ಕೇಳಿದರು. ಏನಮ್ಮಾ! ಹುಡುಗ ನಿನಗೆ ಒಪ್ಪಿಗೆಯೇ ಅಂತ.

"ನೀವೆಲ್ಲಾ ಹಿರಿಯರು ಒಪ್ಪಿದಮೇಲೆ ನನ್ನದೇನಪ್ಪ ಎಂದೆ. ಆದರೆ ನೋಡಿ ಅಂದ್ರೆ ಆಮೇಲೆ ಮಂಡ್ಯದಿಂದ ಕಾಗದ ಬಂತು ಅಪ್ಪನಿಗೆ. ಹುಡುಗ ಹುಡಿಗೀನ ಒಪ್ಪಲಿಲ್ಲ ಅಂತ ಬರೆದಿದ್ದರು. ಅಪ್ಪನಿಗೆ ತುಂಬಾ ಕೋಪ ಬಂತು. ನನಗೂ ಯಾಕೋ ಅವಮಾನ ಆದಹಾಗೆ ಆಯಿತು. ಈಗ ನೀವು ಬೇಡ ಅಂದ ಉಬ್ಬು ಹಲ್ಲಿನ ಹುಡುಗೀನ ಒಪ್ಪಿಗೊಂಡನಲ್ಲ. ಹಾಗೇ ಆಗಬೇಕು ಅವನ ಜಂಬಕ್ಕೆ" ಎಂದು ಹೆಂಡತಿ ಗಡಗಡಿಸಿದಳು.

ಆವಳ ಮುಖದ ಮೇಲೆ ಕೋಪದ ಕಳೆ ತಾಂಡವವಾಡುತ್ತಿತ್ತು. ಗಂಡ ಇದನ್ನೆಲ್ಲಾ ನೋಡಿದ.

"ವಿನಾನಾ! ಉಡುಗೊರೆ ಕೊಟ್ಟವರಿಗೆ ಧನ್ಯವಾದ ಅರ್ಪಿಸೋದಕ್ಕೆ ಹೋದರೆ ಹಳೇ ಅನುಭವಗಳು ಮೇಲೆ ಮೇಲಕ್ಕೆ ಬರಬಹುದು. ಆದ್ದರಿಂದ ಈ ಕೆಲಸಕ್ಕೆ ತುಂಡು ಹಾಕೋಣ. ಬೇಗ ಹೋಗಿ ಮುಖ ತೊಳೆದುಕೊಂಡು ಡ್ರೆಸ್ ಮಾಡಿಕೊ, ನಾನೂ ಸಿದ್ಧವಾಗುತ್ತೇನೆ ಹಾಗೇ ವಾಕಿಂಗ್ ಹೋಗಿ, ಚೆನ್ನಾದ ಪಿಕ್ಚರ್ ಇದ್ರೆ ನೋಡಿಕೊಂಡು ಬರೋಣ" ಅಂತ ಹೇಳಿದ.

* * * *

"ಪಿಕ್ಚರ್ ಬಲು ಚೆನ್ನಾಗಿತ್ತು ಅಂದ್ರೆ" ಅಂದಳು ಹೆಂಡತಿ ಹೌದು ಕಣೆ ಪಿಕ್ಚರ್‌ನಲ್ಲಿ ವಿನಾನಾ ಕುಮಾರಿ ಆಡಿದಹಾಗೆ ನೀನೂ ಈಗ ಆಡ್ತಾ ಇದಿ" ಎಂದ ಮೆಚ್ಚಿದ ಗಂಡ ದಿಂಬನ್ನು ಸರಿಮಾಡಿಕೊಳ್ಳುತ್ತಾ.

ಕ್ರಿಕೆಟ್ ಆಟ ಅಪಾಯಕಾರಿಯಾದದ್ದು.

(ವರದಿ)

— ದಿಟ. ಮೊನ್ನೆ ನೂರು ರನ್ನುಗಳನ್ನು ಸ್ಕೋರ್ ಮಾಡಿದ ಹುಡುಗನನ್ನು ಇಬ್ಬರು ಹುಡುಗಿಯರು ಪಂತ್ತಿ, ಮುತ್ತು ಕೊಟ್ಟೇಬಿಟ್ಟರು.

ಕಂಡ್ ಹೆಂಗಸ್ರು

ಬರೆದವರು :
ಹೆಚ್. ಎನ್. ಆನಂದ

★

ನಮ್ಮದೇನು ಜೋಡೆತ್ತಿನ ಗುರ್ತಿನ ಕಚೇರಿ ಅಲ್ಲ. ಯಾವಾಗಲೂ ಜನ ತುಂಬಿರೋದಕ್ಕೆ. ಸಣ್ಣದೊಂದು ಎಲೆಕ್ಟ್ರಿಕ್ ಸಾಮಾನು, ರೇಡಿಯೋ ಬಿಡಿ ಭಾಗಗಳು ಮಾರಾಟ ಮಾಡೋ ಅಂಗಡಿ. "ಆ ಬಲ್ಬ್ ಇದೆಯಾ ಸಾರ್" ಎಂದೋ, "ಈ ಸೆಕೆಂಡ್ ಹ್ಯಾಂಡ್ ಹೋಲ್ಡರುಗಳು ಸಿಗುತ್ತ್ಯೇ ನಿಮ್ಮತ್ರ" ಎಂದೋ, ಕೇಳುವುದೇ ಜಾಸ್ತಿ. ಆಗಾಗ change ಗೋಸ್ಕರ ಒಂದಿಷ್ಟು ವ್ಯಾಪಾರವಾಗುತ್ತಿತ್ತು.

ಒಂದು ದಿನ ನಮ್ಮ ಅಂಗಡಿಗೆ ಬೋರ ಬಂದ. ಬೋರಾ ಯಾರೂ ಅಂದ್ರಾ? ಅದೇ ವಿಧಾನ ಸೌಧದಲ್ಲಿರೋ ನಮ್ಮ ರಾಯರ ಕಚೇರಿ ಜವಾನ. ಮನೆ ಡ್ಯೂಟಿ ಮೇಲೆ ಇದಾನೆ ವಿಧೇಯ. ಇನ್ನೂ ಬಕೀಟು ತೆಗೊಂಡು ಮೆರವಣಿಗೆ ಹೊರಟಿಲ್ಲ, ನಮ್ಮ ರಾಯರಿಗೆ ರೇಡಿಯೋ ರಿಪೇರಿ ಹುಚ್ಚು. ಅವರೇ ರೇಡಿಯೋಗೆ ರಿಪೇರಿನೂ ಮಾಡುತ್ತಿದ್ದರೂ, ರಿಪೇರಿಗೆ ಅಸ್ತಿಭಾರಾನೂ ಹಾಕುತ್ತಿದ್ದರು. ಬೋರಾ ಬಂದವನೇ "ಸ್ವಾಮೇರಾ, ಅದೇನೋ .. ಕಂಡ್ ಹೆಂಗಸ್ರು ಬೇಕಂತೆ" ಎಂದ. ನನಗೆ ರೇಗಿತು. "ಇದು ಯಾವ ಅಂಗ್ಡಿ ಗೊತ್ತೇನಯ್ಯಾ"-ಎಂದೆ. "ಕೋಪ ಬೇಡಿ ಸ್ವಾಮಿ, ರಾಯರೇ ತೊಗೊಂಬಾ ಅಂದ್ರು, ಕಂಡ್ ಹೆಂಗ್ಸರನ್ನ ಕೇಳು ಕೊಡ್ತಾರೆ" ಎಂದು ಮತ್ತೊಮ್ಮೆ ಹೇಳಿದ. "ಕೊಡ್ತಾರೆ ಇನ್ನೊಂದು ಅಂಗಡೀಗೆ ಹೋಗಿ ಕೇಳಿದರೆ, ಕೆನ್ನೆಗೆ" ಎಂದೆ, ಬೈದು ಕಳಿಸಿದೆ.


ಸಂಜೆ ರಾಯರೇ ಬಂದರು. "ಏನ್ಸಾರ್, ಬೋರಾ ಬೆಳಿಗ್ಗೆ ಏನೋ ಬೇಕೂಂತ ಬಂದಿದ್ದ" ಎಂದೆ. "ಅವನ ತಲೆ, Condenser ತೊಗೊಂಡು ಬಾ ಅಂದ್ರೆ ಏನು ಹೇಳಿದನೋ? ನೀವು ಬೈದು ಕಳಿಸಿದರಂತೆ. ಏನಂದ ಅವ" ಎಂದರು. ವಿಷಯ ತಿಳಿಸಿದೆ. ಚೌತಿ ಚಂದ್ರನ್ನ ನೋಡಿದರೆ ಹೀಗೂ ಅಪಖ್ಯಾತಿ ಬರಬಹುದೇನೋ ಎಂದರು ರಾಯರು.

ಮಾಲೀಕರಿಗೆ ಪ್ರವೇಶವಿಲ್ಲ

ಪುಣ್ಯದಿನ. ಅಕ್ಟೋಬರ್ ಎರಡನೆಯ ತಾರೀಖು ಬಾಪೂಜಿಯವರ ಹುಟ್ಟಿದ ಹಬ್ಬ, ರಾಷ್ಟ್ರಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡ ಮಹಾತ್ಮನ ಜನ್ಮದಿನ. ಅಂತಹ ಶುಭದಿನದಲ್ಲೇ ರಾಷ್ಟ್ರದ ಸಮಸ್ತ ಜನರಲ್ಲಿ ಬಹುಮಂದಿಗೆ ಅನುಕೂಲವಾದಂತಹ ಸುಧಾರಣೆಗಳನ್ನು ತರಬೇಕು.

ತಂದರು ನಮ್ಮ ಊರಿನಲ್ಲಿಕೂಡ, ಈ ವರ್ಷ. ಈ ಶುಭದಿನದಿಂದ ಭೂ ಸುಧಾರಣಾ ಕಾನೂನು ಜಾರಿಗೆಬಂತು,

ಪ್ರತಿಯೊಂದು ಜಮೀನಿನ ಮೇಲೂ ಬೋರ್ಡುತಗುಲಿಸಿದರು ಮಾಲೀಕರಿಗೆ ಪ್ರವೇಶವಿಲ್ಲ ಇನ್ನುಮುಂದೆ ಅಂತ. ಅಂದರೆ ಸ್ವಂತ ಬೇಸಾಯ ಮಾಡದ, ಸ್ಥಳದಲ್ಲೇ ಇರದ, ಮಾಲೀಕರು ಇನ್ನುಮುಂದೆ ಜಮೀನಿನ ಒಳಕ್ಕೆ ಬರಕೂಡದು ಅಂತ.



ಈಗ ಮುಂಡಲಗಿರಿಗೌಡ ಭೂಮಿಯ ಮಾಲೀಕ, ಎರಡು ಪುಟಾಣಿ ಮನೆಗಳಿದ್ದ ಆರು ಎಕರೆ ಜಮೀನಿಗೆ ಅವನೇ ಒಡೆಯ. ಮೊದಲ ಮೂರು ತಿಂಗಳು ದುಡಿದು ಭೂಮಿಯು ಸುತ್ತ ಕಟಕಟೆ ನೆಟ್ಟು, ಬೋರ್ಡುತೂಗಿದ. ಅಮೇಲೆ ಧಿಮಾಕಿನಿಂದ

ಹೋಗಿ ಎರಡನೆಯ ಮದುವೆ ಮಾಡಿಕೊಂಡ. ಕೆಂಪು ಚೌಕಳಿಲಪ್ಪಟ್ಟೆಸಂತ್ತಿ, ಹಸಿರುಕಲ್ಲು ಉಂಗುರ ಹಾಕ್ಕೊಂಡು ಸಂತೆಕಡೆಗೆ ಮೂಡಲಗಿರಿಗೌಡ ಹೊರಟ ಅಂದರೆ, ನವಿಲು ವಸಂತಕಾಲಡಲ್ಲಿ ಹೆಜ್ಜೆಹಾಕ್ತಾ ಹೆಣ್ಣಿನ ಕಡೆಗೆ ಹೋದಹಾಗೆ ಇರುತ್ತಿತ್ತು. ಮೋಜು ಮಾಡ್ತಾ ಇದ್ದ ಮೂಡಲಗಿರಿಗೌಡ. ನಂದು ಜಮೀನು ಅನ್ನೋಖುಷೀಲಿ, ಉಳುಕ್ಕೇ ಹೋಗಲಿಲ್ಲ. ಕೂಲಿ ಆಳು ಇಟ್ಟು ಉಳಿಸಿದರಾಯಿತು ಅಂತ ಧಿಮಾಕು ಮಾಡ್ತಾ ಇದ್ದ. ಮಳೆ ಬರೋ ಹೊತ್ತಿಗೆ ನೆಲವನ್ನು ಇನ್ನೂ ಉತ್ತೇ ಇದ್ದಿಲ್ಲ. "ಈ ವರ್ಷ ಬಿತ್ತನೆ ಹಾಕದೆ ಇದ್ದರೆ ಏನಾತು ? ಸಾಕಷ್ಟುಕಾಳು ಹಗೇವಿನಲ್ಲಿದೆಯಲ್ಲ. ಮುಂದಿನವರ್ಷ ಭರ್ಜರಿ ಫಸಲು ತೆಗೀತೀನಿ ?" ಅಂತ ಎರಡನೆಯ ಹೆಂಡತಿ ಹತ್ತಿರ ಜಂಭ ಕೊಚ್ಚಿಕೊಂಡ.

ಐದಾರು ತಿಂಗಳಲ್ಲಿ ಜಮೀನಿನ ಬಳಿಗೆ ಜೀಪ್‌ಸವಾರಿ ಮಾಡುತ್ತ ಬಂದ ಷಹರಿನ ಸಿದ್ದಯ್ಯ. ಏನಪ್ಪಾ ಮೂಡಲಗಿರಿಗೌಡ ! ಒಂದು ಗುಡಿಸಲನ್ನ ಬಾಡಿಗ್ಗೆ ಕೊಡು ನಂಗೆ, ವರ್ಷಕ್ಕೆ ಮುನ್ನೂರು ಬಾಡಿಗೆ ಕೊಡ್ತೀನಿ. ಜಮೀನಿಗೆ ಹೇಗೂ ಭದ್ರವಾಗಿ ಕಟ್ಟೆಹಾಕಿಸಿದ್ದಿ. ಒಳಕ್ಕೆ ಯಾರೂಬರುವಂತಿಲ್ಲ. ಗುಡಿಸಲಿನಲ್ಲಿ ನಾನೇನು ಮಾಡಿಕೋತೀನೋ ಅದು ನನ್ನ ಗುಟ್ಟು ಅದನ್ನ ವಿಚಾರಿಸಕ್ಕೆ ನೀ ಬರಬೇಡ. ನಿನ್ನ ವ್ಯವಹಾರಕ್ಕೆ ನಾನು ಬರೊಕ್ಕಿಲ್ಲ" ಅಂದ.

"ಮಳೆ ಬರ್ನಿಲ್ಲ. ನೆಲ ಉತ್ತಿಲ್ಲ ಅಂತ ಕಾಳಜಿಮಾಡ್ತಾ ಇದ್ದೆ. ಧನಲಕ್ಷ್ಮಿ ಒಲಿದರೆ ಹಿಂಗೇನೆ. ವರ್ಷಕ್ಕೆ ಮುನ್ನೂರು ರೂಪಾಯಿ ಬಾಡಿಗೆ ! ಅಂದರೆ ಇಪ್ಪತ್ತು ಖಂಡುಗ ರಾಗಿ ಬೆಳೆದ್ಹಂಗೇ ಆತು. ಅಂದುಕೊಂಡ ಮೂಡಲಗಿರಿಗೌಡ. ಆಗಲಿ ಅಂತ ಸಿದ್ದಯ್ಯನಿಗೆ ಹೇಳಿದ.

ಸಿದ್ದಯ್ಯನ ಜೀಪು ಷಹರಿನಿಂದ ಮೂಡಲಗಿರಿಗೌಡನ ಜಮೀನಿಗೆ ಓಡಾಡು ವುದಕ್ಕೆ ಶುರುಮಾಡಿತು. ಬಾಡಿಗೆ ಗುಡಿಸಲ ಸುತ್ತ ಸಿದ್ದಯ್ಯ ಕಾವಲು ಹಾಕಿಸಿದ. ಸೀಳುನಾಯಿಗಳನ್ನು ಸಾಕಿದ. ಗುಡಿಸಿಲಿನಿಂದ ಏನೇನೊ ವಾಸನೆ ಬರುತ್ತಿತ್ತು, ಮೊದಮೊದಲು ಚರ್ಮದ ಚೀಲಗಳ ಓಡಾಟ ಗುಡಿಸಿಲಿನಿಂದ ಜೀಪಿಗೆ ಶುರುವಾಯ್ತು. ಬರಬರ್‍ತಾ ಲಾರಿ ಓಡಾಟಕ್ಕೆ ಪ್ರಾರಂಭವಾಯಿತು. ಪೀಪಾಯಿ ಸಾಗಾಣಿಕೆ ಶುರುವಾಯ್ತು.

ಗುಡಿಸಿಲಿನಿಂದ ಹೊರಗೆ ಬಂದು ಮೂಡಲಗಿರಿಗೌಡನ ಮನೆಗೆ ಸಿದ್ದಯ್ಯ ಹೋಗಿ "ಬಾಯಾರಿಕೆ, ವಸಿ ನೀರುಕೊಡ್ತೀರಾ"ಅಂತ ಕೇಳಿ ಇಸುಕೊಂಡು ಕುಡಿದಿದ್ದ್ನೂ ಉಂಟು. ಷಹರಿನ ಆಸಾಮಿ ಹಳ್ಳಿಗಾಡ ಮನೆಗೆ ಬಂದು ನೀರು ಕೇಳಿದರೆ ಹಳ್ಳಿ ಹೆಂಗಸು ಬೆರಗು ಬೆರಗಾಗಿ ನೋಡದೆ ಇರುತ್ತ್ಯೆ ?

ಮೂಡಲಗಿರಿಗೌಡನಿಗೆ ಕೈತುಂಬಾ ಹಣ. ಜತೆಗೆ ಭೂಮಿಯ ಒಡೆಯ. ಕೇಳಬೇಕೇ ಅವನ ಜಂಭಾನ. ಸಂತೆಸಂತೆಗೂ ಹೋಗಿ ಕೋಳಿಕಾಳಗದಲ್ಲಿ ಬಾಜಿ ಕಟ್ಟೋಕ್ಕೆ ಶುರು ಮಾಡಿದ.

ಒಂದಾರು ತಿಂಗಳು ನಡೆಯಿತು. ಸಿದ್ದಯ್ಯನೇ ಒಂದುದಿನ "ಗೌಡ ! ಲಾರಿ ಓಡಾಟದಿಂದ ನಿನ್ನ ಜಮೀನಿಗೆ ಕಷ್ಟ ಆಗೈತೆ–ಆದ್ದರಿಂದ ವರ್ಷಕ್ಕೆ ಆರನೂರು ರೂಪಾಯಿ ಬಾಡಿಗೆ ಕೊಡ್ತೀನಿ ಇನ್ನು ಮೇಲೆ" ಅಂದ

"ನಾನೇ ಕೇಳೋವ ಅಂತಿದ್ದೆ, ಬಾಡಿಗೆ ಹೆಚ್ಚು ಬೇಕು ಅಂತ. ಲಾರಿ ಓಡಾಡಿ ನೆಲ ಕೊರಕಲು ಬಿದ್ದಿದೆ. ಮುಂದಿನ ವರ್ಷ ಉಳುಕ್ಕೆ ಕಷ್ಟ ಅಂತ. ನೀನೇ ಹೇಳಿದ್ದು ಪಸಂದಾಯಿತು " ಅಂತ.

ಆರು ತಿಂಗಳಾಯಿತು, ತಾಲ್ಲೂಕಿಂದ ಪೋಲೀಸಿನವರಿಬ್ಬರು ಮೂಡಲಗಿರಿಗೌಡನ ಜಮೀನಿನ ಬಳಿಗೆ ಬಂದರು. "ಯಾಕ್ರಿ ಬಂದಿದ್ದು ? " ಅಂತ ಮೂಡಲಗಿರಿಗೌಡ ಕೇಳಿದ "ಇಲ್ಲಿ ಯಾರೋ ದನಾನ ಕೊಂದಿದ್ದಾರೆ ಅಂತ. ಅರ್ಜಿ ಬಂದಿತ್ತು. ತಪಾಸು ಮಾಡುವ ಅಂತ ಬಂದ್ವಿ. ಇಲ್ಲೇನೂ ಸುಳಿವೇ ಇಲ್ಲ" ಅಂತ ಪೋಲೀಸಿನವರಂದರು, "ಅಜೂಬಾಜು ಇರೋವರೆಲ್ಲ ಒಕ್ಕಲ ಮಕ್ಕಳು, ದನಾನ ಕೊಲ್ಲುವವರು ಯಾರೂ ಇಲ್ಲಿಲ್ಲ" ಎಂದ ಮೂಡಲಗಿರಿಗೌಡ. "ನಮಗೂ ಹಾಗೆಯೇ ಅನ್ನಿಸ್ತು " ಅಂತ ಹೇಳಿ ಪೋಲೀಸಿನವರು ಹೊರಟು ಹೋದರು,

ಒಂದು ಹದಿನೈದು ದಿವಸವಾಗಿರಬಹುದು. ದೊಡ್ಡ ಸಂತೇಗೆ ಹೋಗಿದ್ದ ಮೂಡಲಗಿರಿಗೌಡ. ಕೋಳಿಕಾಳಗದಲ್ಲಿ ಹಣ ಗಿಟ್ಟಿತ್ತು, ಹತ್ತಿರಹಾಕಿದ್ದ ಡೇರಾಕ್ಕೆ ಹೋಗಿ ಸಿನಿಮಾನೋಡಿದ. ಹಿಂತಿರುಗುವ ಹೊತ್ತಿಗೆ ರಾತ್ರಿ ಹನ್ನೆರಡಾಗಿತ್ತು. ತನ್ನ ಮನೆಯ ಬಾಗಿಲು ತಟ್ಟಿದ. ಬಾಗಿಲು ತೆರೆಯಿತು. ಒಳಗೆ ಹೋದ. ದೀಪವಿಲ್ಲ. ಹಣತೆಹಚ್ಚಿದ–ನೋಡ್ತಾನೆ ಹೆಂಡತಿ ಇಲ್ಲ ಎಲ್ಲೋ ಹೊರಗೆ ಹೋಗಿರಬಹುದು ಅಂತ ಬಾಡಿಗೆಗೆಕೊಟ್ಟ ಗುಡಿಸಲ ಬಳಿಗೆಹೋದ. ಅಲ್ಲಿ ಕಾವಲು ಆಳೂ ಇಲ್ಲ. ಸೀಳುನಾಯಿಗಳೂ ಇಲ್ಲ. ಬಿಕೋ ಅನ್ನುತ್ತಿತ್ತು. ಈ ಹೊತ್ತಿನಲ್ಲಿ ಏನು ತಪಾಸು ಮಾಡೋದು, ಮಲಗುವ ಬೆಳಗ್ಗೆ ಎದ್ದು ಹುಡುಕೋದು ಅಂದುಕೊಂಡ. ಮನೆಗೆ ಹಿಂತಿರುಗಿ ಮಲಗಿದ.

ಬೆಳಗಿನ ಝಾವದಲ್ಲೇ ಏನೋ ಗಲಾಟೆ! ಅರ್ಧ ಕನಸು ಗೌಡನಿಗೆ. ಅಷ್ಟರಲ್ಲೇ ಯಾರೋ ಬಂದು ಬಾಗಿಲುತಟ್ಟಿ ಕೂಗಿದಂತಾಯ್ತು. ಎದ್ದ ಗೌಡ. ಹಣತೆ ದೊಡ್ಡದು ಮಾಡಿದ. ಬಾಗಿಲು ತೆಗೆದ. ಪೋಲೀಸ್ ಇನ್ಸ್‌ಪೆಕ್ಟರು, ಇಬ್ಬರು ಕಾನ್‌ಸ್ಟೇಬಲ್ ರೊಡನೆ ನಿಂತಿದ್ದರು. " ಎಷ್ಟು ದಿವಸದಿಂದ ಈ ವ್ಯಾಪಾರ ಮಾಡ್ತಿದಿ, ದಸ್ತಗಿರಿ

ಮಾಡಿದ್ದೀನಿ ನಿನ್ನ" ಅಂತ ಹೆದರಿಸಿದ ಇನ್‌ಸ್ಪೆಕ್ಟರು. "ನಾನೇನು ವ್ಯಾಪಾರ ಮಾಡೀನಿ. ಏನೂ ಇಲ್ಲ" ಅಂದ ಗೌಡ. ಮತ್ತೆ ನಿನ್ನ ಜಮೀನಿನಲ್ಲಿ ಆ ಗಂಡಿಸಿಲ್ಲಿನಲ್ಲಿ ಕಳ್ಳ ಭಟ್ಟಿ ಇಳಿಸ್ತಾ ಇದ್ದಿ ಎಲ್ಲಾ ಸಾಮಾನೂ ಸಿಕ್ಕಿದೆ. ಬಾ ಟೇಸನ್ಗೆ" ಎಂದು ಪೋಲೀಸಿನವರು ಹೇಳಿ ಕರೆದುಕೊಂಡು ಹೋದರು.

ಗೌಡನ ಎರಡನೆ ಹೆಂಡತಿ ಜೊತೆಗೆ ಸಿದ್ದಯ್ಯ ಷಹರಿಗೆ ಹೋಗಿ ಸುಖವಾಗಿ ದ್ದಾನೆ. ಬೇರೊಲ್ಲೋ ಒಂದು ವರ್ಷ ಕಸಬು ನಡೆಸ್ತಾನು.

ಇತ್ತ ಮೂಡಲಗಿರಿ ಗೌಡನೂ ಸೆರೆಮನೆಯಲ್ಲಿ ಸುಖವಾಗಿದ್ದಾನೆ. ಮೈ ಮುರಿದು ದುಡಿಯೋದನ್ನು ಕಲಿಸುತ್ತಾ ಇದ್ದಾರೆ. ಅಂದಮೇಲೆ ಅವನಿಗೆ ಬಿಡುಗಡೆ ಯಾದಾಗ, ತನ್ನ ಭೂಮಿಗೆ ಬಂದು ದುಡಿಯೋಕ್ಕೆ ಅಭ್ಯಾಸ ದೊರೆತ ಹಾಗಾಯ್ತು. ಮುಂದೆ ಅವನೂ ಸುಖವಾಗಿರ್ತಾನೆ.

ಎರಡು ಮೂರು ವರ್ಷಗಳಾದ ಮೇಲಾದರೂ ಅಕ್ಟೋಬರ್ ಎರಡನೇ ತಾರೀಖು ಉಳುವವನೇ ದಿಟವಾಗೂ ಒಡೆಯನಾಗುತ್ತಾನೆ. ಮೂಡಲಗಿರಿ ಗೌಡನ ಜಮೀನಿನಲ್ಲಿ ಅವನ ಪೃಥ್ವಿ ಆಗ ಸಸ್ಯಶಾಲಿನಿ ಆಗುತ್ತಾಳೆ.

ರಾಜಾಜಿಯವರ ವಿರುದ್ಧ ಮದ್ರಾಸಿನಲ್ಲಿ ಪ್ರದರ್ಶನ ನಡೆಸಿದರಂತೆ.

—ರಾಜಾಜಿಯವರ ಉತ್ಸಾಹ ಈಗ ಹೆಚ್ಚಾಗಿದೆಯಂತೆ.

*   *   *   *

ಲಾಯರುಗಳೆಲ್ಲಾ ಹರತಾಳ ಆಚರಿಸಿದರೆ ಗತಿಹೇಗೆ ? ಎಂದೊಬ್ಬರು.

—ಗತಿ ಏನು ವ್ಯವಹಾರಗಳು ಸಮಾಪ್ತಿಯಾಗುತ್ತೆ.

*   *   *   *

ನಿಕಾ ಆಗಿದ್ದ ಇಂಡೋನಿಷ್ಯಾ ಮತ್ತು ಚೀನ ಈಗ ತಲಕ್ ಅಂತ ಅಂದು ಬಿಟ್ರಂತೆ.

—ಮುಂದೆ ಪಾಕಿಸ್ತಾನದ ಸರದಿ-ತಲಕ್ ಅನ್ನೋಕ್ಕೆ.

*   *   *   *

ಮೊದಲೆಲ್ಲಾ ಕತ್ತೆಗಳ ಬಾಲಕ್ಕೆ ಹುಡುಗರು ಪಟಾಕಿ ಸರ ಕಟ್ಟಿ ಹತ್ತಿಸಿದ್ದರು

—ಈಗ ಹಾಗೆ ಮಾಡುಲ್ಲ! ಆಟೋರಿಕ್ಷಾಗಳು ಟಫ ಟಫ ಓಡುವುದನ್ನು ನೋಡಿಯೇ ಸಂತೋಷ ಪಡುತ್ತಾರೆ.

ಭಾಗೀರ್ಥಿ

"ನಿಮ್ಮ ಹೆಸರು ?" ನಾನು ಕೇಳಿದೆ.

ಎದುರಿಗೆ ನಿಂತಿದ್ದ ವ್ಯಕ್ತಿ ಅಸಂಭದ್ಧವಾಗಿ ನಕ್ಕಿತು. "ಭಾಗೀರ್ಥಮ್ಮ ಅಂತ ನನ್ನ ಹೆಸರು."

ತಲೆಯ ಮೇಲೆ ಒಣಗಿ, ಕೆದರಿದ ಕೂದಲಿನ ಹೊರೆ, ಬೋಳು ಹಣೆ, ಉಬ್ಬು ಹಲ್ಲು, ಉದ್ದುದ್ದ ಉಗುರಿನಿಂದ ಅಲಂಕೃತವಾದ ಬೆರಳುಗಳು, ಹಂಸಪಾದ, ಮೈಗೆ ಸುತ್ತಿಕೊಂಡಿದ್ದ ಕೆಂಪು ಸೀರೆ– ಇವನ್ನೆಲ್ಲಾ ನೋಡಿ ತಲೆ ತಗ್ಗಿಸಿದೆ.

"ನಿಮಗೆ ಯಾವ ಊರಾಯ್ತು ? ಯಾರೂ ಇಲ್ಲವೆ ನಿಮಗೆ ?"

"ಇಷ್ಟು ದಿನಾನುವೆ ಸಾಗರದೆಹಾಗೆ ಇದ್ದೆ. ನಮ್ಮ ಯಜಮಾನ್ರಿಗೆ ನಾನು ಎರಡನೇ ಹೆಂಡ್ತಿ. ನನ್ನ ಮದುವೆ ಮಾಡಿಕೊಟ್ಟಾಗ್ಲೆ ಅವರಿಗೆ ವಯಸ್ಸಾಗಿತ್ರಿ. ಎಂತದಾಗಿತ್ತೋ ಏನಪ್ಪ, ಇದಕ್ಕಿದ್ದಾಂಗೆ ಒಂದು ದಿನ ಹೋಗ್ಬಿಟ್ರು. ನನ್ನ ಹೆಸರಿಗೆ ಐನೂರೋ ಏಷ್ಟೊ ಬ್ಯಾಂಕಿನಾಗೆ ಇಟ್ಟಿದ್ದರಂತೆ. ನಂಗೊಂದೂ ಗೊತ್ತಿಲ್ರಿ ಎರಡು–ಮೂರು ವರ್ಷ ಅಲ್ಲಿ ಇಲ್ಲ ಕೆಲಸ ಮಾಡಿಕೊಂಡಿದ್ದೆ. ನಿಮಗೆ ಮನೆ ಕೆಲ್ಸಕ್ಕೆ ಜನ ಬೇಕಂತೆ ಅಂತ ಯಾರೊ ಹೇಳಿದರು. ಅದಕ್ಕೆ ಬಂದೆ."

"ನೋಡಿ, ನೀವು ಬೇಕಾದರೆ ಇರಬಹುದು. ಆದರೆ ಸಂಬಳ–ಗಿಂಬಳದ ವಿಷಯ ಎತ್ತಬೇಡಿ. ಎರಡು ಹೊತ್ತು ಊಟ ಮಾತ್ರ ಗ್ಯಾರಂಟಿ."

ಹೀಗೆ ಭಾಗೀರ್ಥಿ ನಮ್ಮ ಮನೆ ಹೊಕ್ಕಿದ್ದು. ಈಗ ಏಳೆಂಟು ವರ್ಷಗಳು ಸರಿದಿವೆ. "ಭಾಗೀರ್ಥಮ್ಮ ಹೋಗ್ರಿ, ಬನ್ರಿ" ಎಂಬ ಗೌರವ ಸಂಭೋಧನೆ ತಪ್ಪಿ, ಈಗ ಕೇವಲ "ಭಾಗೀರ್ಥಿ ಹೋಗು, ಬಾ" ಎನ್ನುವಷ್ಟಾಗಿದೆ. ನಮ್ಮಲ್ಲಿಗೆ ಬರುವುದಕ್ಕೆ ಮೊದಲು, ಶಿಶುವಿಹಾರದಲ್ಲಿ ಮೇಡಂ ಆಗಿ ಒಂದು ವರ್ಷ ಕಾಲಕಳೆದ ಸ್ವಾರಸ್ಯ ಅನುಭವ ಭಾಗೀರ್ಥಿಗಿದೆ. ಶಿಶುವಿಹಾರದ ಆಟದ ಸಾಮಾನುಗಳನ್ನು ಒಂದು ಕೋಣೆಯಲ್ಲಿ ಕೂಡಿ, ಬೀಗ ಹಾಕಿ. ಅವಕ್ಕೆಲ್ಲಾ ಗೆದ್ದಲು ಹಿಡಿಸಿದಳಂತೆ. ಅದು ಗೊತ್ತಾದ ದಿನವೇ ಭಾಗೀರ್ಥಿಯನ್ನು ಆ ಉದ್ಯೋಗದ ಹೊರೆಯಿಂದ ಪಾರುಮಾಡಲಾಯಿತಂತೆ.

ಹೆಚ್ಚು ಮಾತನಾಡುವುದರಲ್ಲಾಗಲೀ ಅಥವಾ ಶ್ರಮ ಪಡುವುದರಲ್ಲಾಗಲೀ ಭಾಗೀರ್ಥಿಗೆ ನಂಬಿಕೆ ಇಲ್ಲ. ಅದಷ್ಟು ಆರಾಮಾಗಿ ದಿನಗಳನ್ನು ನೂಕುವುದೇ ಅವಳ ಜೀವನದ ಧ್ಯೇಯವಿರಬಹುದೆಂದು ನನಗನಿಸುತ್ತದೆ.

ಭಾಗೀರ್ಥಿ ಅಂದೊಮ್ಮೆ ಇಂದೊಮ್ಮೆ ಜಡೆ ಹೆಣದುಕೊಳ್ಳುವುದೂ ಉಂಟು. ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಎಚ್ಚರವಾಗಿರುವುದೂ ಉಂಟು. ಬೆಳಿಗ್ಗೆ ಎದ್ದು ಒಂದು ವಾಟಿಗೆ ಬಿಸಿ ಕಾಫಿ ಹೀರಿದಾಗಲೇ ಅವಳ ನರನಾಡಿಗಳಲ್ಲಿ ಜೀವ ಹರಿಯುವುದು. ಕಸ, ಮುಸುರೆ ಒಂದಿಷ್ಟು ಮಾಡಿ, ಹಚ್ಚ ಹಗಲು ತನ್ನ ದೇಹವನ್ನು ನಿದ್ರಾದೇವತೆಗೆ ಒಪ್ಪಿಸುವಳು, ಮಧ್ಯಾಹ್ನ ಎರಡಕ್ಕೋ ಮೂರಕ್ಕೋ ಎದ್ದು, ಬಟ್ಟೆ ಒಗೆದು ಒಂದು ಗೋಪುರದಷ್ಟು ಅನ್ನ ತಿಂದು ಕತ್ತಲೆ ಕೋಣೆ ಸೇರಿದಳೆಂದರೆ, ಪುನಃ ಅವಳ ಚಲನವಲನಗಳು ನಿಮಗೆ ಕಾಣುವ ಅದೃಷ್ಟ ಸಿಗುವುದು ಸಾಯಂಕಾಲವೆ. ಸಂಜೆ ಕಾಫಿ ಹೊಟ್ಟೆಗೆ ಬಿದ್ದಿತೆಂದರೆ. ಅವಳಲ್ಲಿ ರಾತ್ರಿ ಒಂಬತ್ತರವರೆಗೂ ನವ ಚೇತನ ಸಂಚಾರವಾಗುವುದು. ಅಲ್ಲಿಗೆ ಮುಗಿಯಿತು ಆ ದಿನದ ಕತೆ. ಹೀಗೆ, ಭಾಗೀರ್ಥಿಯ ದಿನಚರಿ ಇಡೀ ಮಾನವ ಪ್ರಗತಿ ಹಾಗೂ ನಾಗರಿಕತೆಗೆ ಸವಾಲಿನಂತಿದೆ.

ಯಾವ ಆಸೆ ಆಕಾಂಕ್ಷೆಗಳೂ ಇಲ್ಲದೆ, ಇದ್ದುದರಲ್ಲೇ ಆನಂದವನ್ನು ಅರಸುವ ಇಂಥ ನಿರ್ಲಿಪ್ತ ಜೀವನವನ್ನು ಕಂಡೇ ನಮ್ಮ ಹಿಂದಿನವರು " ಅನಾಸಕ್ತಿ ಯೋಗ " ವನ್ನು ಸೃಜಿಸಿದರೇ ?

ವಾಟರ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್, ಇನಾಂ ಜಮೀನುಗಳ ಕಾನೂನು ಇತ್ಯಾದಿ ಸ್ವತಂತ್ರ ಭಾರತದ ಯಾವತ್ತು ಕಾನೂನು ಕಟ್ಟಳೆಗಳಿಂದ ಬಿಡುಗಡೆ ಹೊಂದಿರುವ ಭಾಗೀರ್ಥಿಯ ಜೀವನದ ಮರ್ಮವೇನು ?

ವ್ಯಕ್ತಿ ಸ್ವಾತಂತ್ರ್ಯ, ಗೋವ ನಮ್ಮದು, ಹಿಂದಿಗೆ ವಿರೋಧ ಮುಂತಾದ ಆಧುನಿಕ ಕಚ್ಚಾಟಗಳಲ್ಲಿ ಭಾಗೀರ್ಥಿಯ ಪಾತ್ರವೇನು ? (ಪಾತ್ರವಿದೆಯೆ ?)

ಹೀಗೆ ಒಂದು ಸಂಜೆ, ಅನೇಕ ಪ್ರಶ್ನೆಗಳ ಹೊಡತಕ್ಕೆ ನನ್ನ ತಲೆ ಸಿಕ್ಕಿರುವಾಗ— ನೊಣ ಕೂತ ಹಾಗೆ ಮೀಸೆ, ಬಿಸ್ಕತ್ ಬಣ್ಣದ ಕೋಟು. ಪೈಜಾಮದ ಹಾಗೆ ಅಗಲ ಅಗಲವಾಗಿ ಪ್ಯಾಂಟು ಧರಿಸಿದ ಒಬ್ಬ ವ್ಯಕ್ತಿ ನನ್ನ ಮನೆ ಪ್ರವೇಶಿಸಿದರು. ಮುಖದ ಮೇಲೆ ಎನ್. ಜೀ ವೋ ಕಳೆ ಇತ್ತು ಪ್ರಶ್ನಾರ್ಥಕವಾಗಿ ಅವರ ಕಡೆ ನೋಡಿದೆ.

" ಭಾಗೀರ್ಥಮ್ಮ ಎನ್ನುವವರು ಇಲ್ಲಿ ವಾಸವಾಗಿದ್ದಾರೆಯೋ " ಅವರು ಕೇಳಿದರು, ಆಶ್ಚರ್ಯವಾಯಿತು. " ನೀವು ಕೇಳುತ್ತಿರುವುದು—"

" ಸಕೇಶಿ. ಅವರು ಇಲ್ಲಿರುವುದು ಹೌದೆ ? "

ಅವರು ಈ ಬಗ್ಗೆ ಅಲ್ಲಿ–ಇಲ್ಲಿ ವಿಪರೀತ ಅಲೆದಾಟ ಮಾಡಿದ್ದಹಾಗೆ ಕಂಡಿತು. ಸರಿ. ಹಿತ್ತಲಲ್ಲಿ ಮುಸುರೆ ಪಾತ್ರೆಯನ್ನು ತಿಕ್ಕುತ್ತಿದ್ದ ಭಾಗೀರ್ಥಿಯನ್ನು ಕರೆಯಲು ನಮ್ಮ ಹುಡುಗನನ್ನು ಅಟ್ಟಿದೆ. ನಡುಮನೆಗೂ ವರಾಂಡಕ್ಕೂ ಮಧ್ಯ ಇರುವ ಬಾಗಿಲಲ್ಲಿ ಭಾಗೀರ್ಥಿ ಬಂದು ನಿಂತುಕೊಂಡಿತು ; ಏನೂ ಅರ್ಥವಾಗದೆ ಸೂರು ನೋಡಿತು, ನಾನು ವಿವರಿಸಿದೆ : " ಭಾಗೀರ್ಥಮ್ಮ ಅಂದರೆ ಇದೇ—ಅದೇ. ಇದೇ ಮನೇಲಿ ಇರೋದೂಂತ. ಹ್ಹಿ ಹ್ಹಿ "

ಬಂದ ಆಸಾಮಿ ಭಾಗೀರ್ಥಿಯನ್ನು ಕೂಲಂಕಷವಾಗಿ ನೋಡಿದರು. " ಚಿಕ್ಕಮ್ಮಾ ! ನನ್ನ ಗುರುತು ಸಿಗಲಿಲ್ಲವೇ ನಿಮಗೆ ? ನಾನು...ಹೈವದನ" ಅವರು ಟರಾರಃ ಭಾಗೀರ್ಥಿ ನಿಂತ ದಿಕ್ಕಿನಲ್ಲಿ ಅಪಾದಮಸ್ತಕ ನೆಲದಮೇಲೆ ಬಿದ್ದರು. ಎದ್ದರು

" ನಿಮ್ಮ ಚಿಕ್ಕಮ್ಮನೆ ಇ–ಇವರು ? " ನಾನು ಕೇಳಿದೆ.

" ನಮ್ಮ ಮಲತಾಯಿ ಸಾರ್ " ಕೋಟನ್ನು ಕೊಡವಿಕೊಳ್ಳುತ್ತ ಅವರು ಹೇಳಿದರು. ನಮ್ಮ ತಂದೆಗೆ ಇವರು ಎರಡನೇ ಸಂಸಾರ. ನಾನು ಮೊದಲನೇ ಹೆಂಡತಿ ಮಗ. ಹತ್ತು ಹನ್ನೆರಡು ವರ್ಷಗಳ ಹಿಂದೆ ನಮ್ಮ ತಂದೆ ತೀರಿ ಹೋಗಿದ್ದು ಆಮೇಲೆ ನಾನು ಓದುವುದಕ್ಕೆ ಹೋದೆ. ಭಿಕ್ಷಾನ್ನ ಮಾಡಿಕೊಂಡಿದ್ದು, ಡಿಪ್ಲೊಮಾ ಮುಗಿಸಿದೆ. ಕೆಲಸಕ್ಕೆ ಸೇರಿಕೊಂಡೆ. ಪಿ. ಡಬ್ಲ್ಯು. ಡಿಪಾರ್ಟಮೆಂಟು—ಏನೊ. ದೇವರು ಅಷ್ಟಿಷ್ಟು ಅನುಕೂಲ ಮಾಡಿದ್ದಾನೆ. ಮದುವೇನೂ ಮಾಡಿಕೊಂಡೆ. ಆ ಲಾಗಾಯ್ತು ನನ್ನ ಹೆಂಡತಿ " ನಿಮ್ಮ ಚಿಕ್ಕಮ್ಮನ ಹುಡುಕಿಸಿ; ಮನೆಗೆ ಕರೆದುಕೊಂಡು ಬನ್ನಿ " ಅಂತ ಒಂದೇ ಸಮನೆ ಪೀಡಿಸ್ತಾಯಿದಾಳೆ." ಉಸಿರೆಳೆದುಕೊಂಡು ಮುಂದು ವರಿಸಿದರು.

" ಎಂಟು ವರ್ಷ ಹುಡುಕಿದೀನಿ ಸಾರ್, ಎಂಟು ವರ್ಷ. ಸ್ನೇಹಿತರು. ಸಂಬಂಧೀಕರು ಪ್ರತಿಯೊಬ್ಬರನ್ನು ವಿಚಾರಿಸಿದೆ ಬೀದಿ ಬೀದಿ ಅಲೆದೆ. ಪೇಪರಿನಲ್ಲಿ ಹಾಕಿಸಿದೆ—"

" ಯಾವ ಪೇಪರ್ರೂ ? " ಥಟಕ್ಕನೆ ನಮ್ಮ ಹುಡುಗ ಕೇಳಿದ.

ಒಂದು ನಿಮಿಷ ಅವರು ದಾರಿ ತಪ್ಪಿದಹಾಗೆ ಕಂಡಿತು. ನಾನು ಕೂಡಲೆ ವಿಷಯ ಬದಲಾಯಿಸಿ, ಅವರ ಸಹಾಯಕ್ಕೆ ಬಂದೆ.

" ಪಾಪ, ನಿಮಗೆ ಈಗ ಒಂದು ನಿಧಿ ಸಿಕ್ಕಹಾಗೆ ಆಗಿರಬೇಕಲ್ಲವೇ ? "

ಸಿಕ್ಕಿತ್ತು. ಏನೋ ಒಂದು ಹಿಡಿದ ಕೆಲಸವನ್ನು ಸಾಧಿಸಿದ ವಿಜೇತ ಕಳೆ ಅವರ ಮುಖದಲ್ಲಿ ಈಗ ಮೂಡಿತ್ತು.

" ತಾವು ಹೇಳಿದ್ದು ನೂರಕ್ಕೆ ನೂರುಪಾಲು ಸತ್ಯ ಸಾರ್ "

ಭಾಗೀರ್ಥಮ್ಮನನ್ನು ತಾನು ಇರುವ ಊರಿಗೆ (ಬಿಜಾಪುರ) ಕರೆದುಕೊಂಡು ಹೋಗುತ್ತೇನೆಂತಲೂ. ಇನ್ನು ತನ್ನ ಮನೆಯಲ್ಲಿ ಅವರು ನಿಶ್ಚಿಂತೆಯಾಗಿವಾಸಿಸುವ ರೆಂತಲೂ, ತನ್ನ ಹೆಂಡತಿಗುತೂ ಅತ್ಯಂತ ಸಂತೋಷವಾಗುವದೆಂದೂ ಮುಂತಾಗಿ ಎಂ । ಹಯವದನರಾವ್ ಹೇಳಿದರು.

'ಅಂದು ನಾವು ಭಾಗೀರ್ಥಿಯನ್ನು ಕಳುಹಿಸಿ ಕೊಟ್ಟದ್ದೊ ಆಯಿತಂ

ಊಟಕ್ಕೆ ಕುಳಿತಾಗ ಯಜಮಾನಿಯೆದುರಿಗೆ ವಿಷಯ ಪ್ರಸ್ತಾಪಿಸಿದೆ. "ಪಾಪದ್ದು. ದೇವರು ಅದಕ್ಕೂ ಒಂದು ಮನೇಂತ ಕಾಣಿಸಿದನಲ್ಲ, ಅದಿರಲಿ, ಆ ಮನುಷ್ಯನ ಹೆಂಡತಿ ನೋಡೂ ಅಂತಿನಿ-ಅತ್ತೇನ ಅಪೇಕ್ಷಿಪಟ್ಟಿದಾಳೆಲ್ಲ ! ನೀನು ಸ್ವಲ್ಪ ನೋಡಿ ಕಲುತ್ಕೋ' ಎಂದು ಮೂದಲಿಸಿದೆ ಅವಳನ್ನು.

ನನ್ನ ಹೆಂಡತಿ ಲಟಿಕೆ ಮುರಿದಹಾಗೆ ಹೇಳಿದಳು "ಗಂಡಸ್ರಿಗೇನ್ರಿ ಗೊತ್ತಾಗುತ್ತೆ ಅವೆಲ್ಲ. ಆ ಹೆಂಗಸಿಗೆ ಏನು ಬಸುರೋ ಬಾಣಂತನವೊ. ನೀರು ನಿಡಿ ಮಾಡ್ಲಿಕ್ಕೆ ಬೇಕಲ್ಲ ಯಾರಾದ್ರು. ಆದಕ್ಕೆ ಹುಡುಕಿಸಿದ್ದಾಳು ಈ ಗೂಬೇನ"

ಒಂದು ಸೌಟ್ ಫುಲ್ ಸಾರು ಸುರಿದು ಹೋದಳು.

ಈಗ ನಮ್ಮ ಮನೆಯಿಂದ ಭಾಗೀರ್ಥಿಯ ನಿರ್ಗಮನವಾಗಿ ಎರಡು ದಿನಗಳಾಗಿವೆ. ಅದೊಂದು ರೀತಿಯ ಅಸ್ಪಷ್ಟ ಮೌನ ಮನೆಯಲ್ಲಿ ತುಂಬಿಕೊಂಡಿದೆ. ಹಾಗೆಂದು ಭಾಗೀರ್ಥಿ ಬಾಯಿಬಡಕು ಸ್ವಭಾವದವಳಾಗಿಳಿದ್ದಳೆಂದೇನಿಲ್ಲ; ಅವಳೇ ರೂಢಿಸಿ ಜೋಬದ್ರತನವೆ ನನ್ನ ಹೆಂಡತಿ ಹಾಗೂ ಹುಡುಗರಿಗೆ ಚಂಡಿಹಿಡಿಸುತ್ತಿತು. ಹೊರಗಡೆ ಹುಡುಗರು ಆಟವಾಡುತ್ತಿದ್ದಾರೆ.

"ಭಾಗೀರ್ಥಿ !" ಯಾರೋ ಕೂಗಿದರು.

ಪತ್ರಿಕೆಯನ್ನು ಬದಿಗೊತ್ತಿ, ಕಣ್ಣುಗಳನ್ನು ಗೇಟಿನಕಡೆ ಹಾಯಿಸಿದೆ. ಅಂದ ಹಾಗೆ ; ಭಾಗೀರ್ಥಿ !!

"ಯಾಕೆ ವಾಪಸ್ಸು ಬಂದದ್ದು ?"

"ಹಯವದನ ಸಾಗರಕ್ಕೆ ಕರಕೊಂಡು ಹೋಗಿದ್ದ ಕಣ್ರೀ. ಹೋಟಲಲ್ಲಿ ಭಾರಿ ತಿಂಡಿಗಿಂಡಿ ಕೊಡಿಸಿದ. ಎಂತದೊ ಕಾಗದಕ್ಕೆಲ್ಲ ನಂದು ರುಜು ಹಾಕಿಸ್ಕೊಂಡ್ನಪ್ಪ ಸಾಯೋ ಹೊತ್ತಿಗೆ ಆದೇ ಇವರು ನನ್ನ ಹೆಸರಿಗೆ ಬ್ಯಾಂಕಲ್ಲೋ ಪೋಸ್ಟಾಪಿಸಲ್ಲೊ ದುಡ್ಡು ಇಟ್ಟದ್ದರಲ್ಲ—ಅದು ಹಯವದನಂಗೆ ಕೊಟ್ರು. ಅವನಿಗೆ ಸೇರಿದ್ದಂತೆ ಅದು "ಅವರ ಮನೆಯಲ್ಲೇ ಇರಿ, ಆಮೇಲೆ ಬಂದು ಕರಕಂಡು ಹೋಗ್ತೀನಿ" ಅಂತ ಹೇಳಿ ಬಸ್ಸು ಹತ್ತಿಸಿದ, ಆದಕ್ಕೆ ಬಂದೆ ಕಣ್ರಿ" ಎಂದು ಹೇಳಿ ಭಾಗೀರ್ಥಿ ಪುನಃ ನಮ್ಮ ಮನೆ ಹೊಕ್ಕಳು.

—ದತ್ತ.

ಪ್ರಶ್ನೋತ್ತರ

ಮನಸ್ಸಿನಲ್ಲಿ ಹುದುಗಿರುವ ಅಸ್ಪಷ್ಟ ಆತಂಕಗಳನ್ನು ಹೊರಗೆಡವಲು ಸೈಕೊ ಎನಾಲಿಸಿಸ್ ಎಂಬ ಪ್ರಯೋಗವನ್ನು ಹುಚ್ಚುಡಾಕ್ಟರುಗಳು ನಡಸುತ್ತಾರೆ. ಕೆಲವು ಪ್ರಶ್ನೆಗಳನ್ನು ಕೇಳುವುದು. ಅದಕ್ಕೆ ಬಂದ ಉತ್ತರಗಳಿಂದ, ರೋಗಿಯ ಆತಂಕ ಏನಿರಬಹುದು ಎಂದು ಊಹಿಸುವುದು.

ಹುಡುಗ ಹುಚ್ಚುಡಾಕ್ಟರು, ಹಿರಿಯ ಹುಚ್ಚುಡಾಕ್ಟರ ಹತ್ತಿರ " ಸ್ವಾಮಿ, ಬಲು ಸುಲಭವಾದ ಪ್ರಶ್ನೆಗಳನ್ನು ಕೇಳುತ್ತೀನಿ. ರೋಗಿಗಳು ವಿಚಿತ್ರ ಉತ್ತರಗಳನ್ನು ಕೊಡುತ್ತಾರೆ. ಅವುಗಳಿಂದ ರೋಗದ ಜಾಡುತಿಳಿಯುವುದಿಲ್ಲ " ಎಂದು ಬಿನ್ನವಿಸಿ ಕೊಂಡ.

ಅವರಂದರು " ಪ್ರಶ್ನೆಗಳನ್ನು ಕೇಳು, ನನ್ನ ಉತ್ತರಗಳಿಂದ ಏನಾದರೂ ತಿಳಿ ಯುತ್ತದೆಯೋ ನೋಡು " ಎಂದು.

ಹುಡುಗ ಹುಚ್ಚುಡಾಕ್ಟರು ಕೇಳಿದ.

" ಸಡಿಲವಾದ ಹೊದಿಕೆ ಇದ್ದು, ಒಳಗೆ ರಸವತ್ತಾದ ದುಂಡನೆ ವಸ್ತು ಇರು ವುದು ಯಾವುದು ? "

ಹಿರಿಯ ಹುಚ್ಚುಡಾಕ್ಟರು " ಕೊಡಗಿನ ಕಿತ್ತಳೆ ಹಣ್ಣು " ಎಂದು ಉತ್ತರಿಸಿದ.

ಆಮೇಲೆ ಹುಡುಗ ಹುಚ್ಚುಡಾಕ್ಟರು ಎರಡನೆ ಪ್ರಶ್ನೆ ಕೇಳಿದ.

"ಬಾಯಿಗೆ ಬಾಯಿ ಕೊಟ್ಟು ಹೀರಿದರೆ ಹಿತವಾಗಿರುತ್ತೆ. ಅಕ್ಕ ಪಕ್ಕಗಳಲ್ಲಿ ಕೈಯಾಡಿಸಿದರೆ ತಂಪಾಗಿರುತ್ತೆ. ಎಳಸಾಗಿದ್ದರೆ ಇನ್ನೂ ಚೆನ್ನು, ಯಾವುದು ?

" ಎಳನೀರು " ಎಂದ ಹಿರಿಯ ಹುಚ್ಚು ಡಾಕ್ಟರು.

ಮೂರನೆ ಪ್ರಶ್ನೆ ಕೇಳಿದ ಹುಡುಗ ಡಾಕ್ಟರು.

" ಹಿತವಾಗಿಯೇ ಮಾತನಾಡುತ್ತಿರುತ್ತೆ. ಹಠಾತ್ತಾಗಿ ಕೆರಳುತ್ತೆ. ಗುರ್ ಗುರ್ ಎನ್ನುತ್ತೆ. ಇಲ್ಲವೇ ಮುನಿಸಿಕೊಂಡು ಕೂತು ಬಿಡುತ್ತೆ. ಅದಿಲ್ಲದ ಜೀವನ ಬೇಸರ ಅದಿದ್ದರೆ ಜೀವನ ತ್ರಾಸು, ಯಾವುದು ? "

" ರೇಡಿಯೋ " ಅಂದ ಹಿರಿಯ ಹುಚ್ಚು ಡಾಕ್ಟರು.

" ಮೂರು ಉತ್ತರಗಳೂ ಸರಿ. ರೋಗಿಗಳು ಹೇಳುವ ವಿಚಿತ್ರ ಉತ್ತರಗಳನ್ನು ಕೇಳಬೇಕು, ನೀವು ಮನಸ್ಸಿನಲ್ಲಿ ಸ್ಥಿಮಿತವಾಗಿದ್ದೀರಿ " ಎಂದು ಹುಡುಗ, ಹಿರಿಯ ಹುಚ್ಚು ಡಾಕ್ಟರಿಗೆ ಹೇಳಿದ.

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೪

Koravanji, November 1965

ಹೊಸ ಪುಸ್ತಕ

ನಮ್ಮ ಅಡಿಗೆ
ಪಥ್ಯದ ಊಟ

ನಮ್ಮಲ್ಲಿ ಬಳಕೆಯಲ್ಲಿರುವ ಸಸ್ಯಾಹಾರಿ ಅಡಿಗೆಗಳ ವೈಜ್ಞಾನಿಕ ವಿವರಗಳು

ವೈದ್ಯರಿರಿಸುವ ಪಥ್ಯವನ್ನು ಸುಲಭವಾಗಿ ಆಚರಿಸಲು
ಎಲ್ಲಾ ವಿವರಗಳನ್ನೂ ಕೊಡುವ ಪುಸ್ತಕ

ಸ್ಥೂಲ ಶರೀರದವರಿಗೆ, ಮಧುಮೇಹ
ಇರುವವರಿಗೆ ಅತ್ಯುಪಯುಕ್ತವಾದುದು

ಲೇಖಕರು :

ಡಾ|| ಎಂ. ಶಿವರಾಂ, ಬಿ.ಎ., ಎಂ.ಬಿ.ಬಿ.ಎಸ್.

ಶ್ರೀಮತಿ ವಿಮಲಾ ಬಿ. ಶೇಷಾದ್ರಿ, ಬಿ.ಎಸ್.ಸಿ.

ವಿವರಗಳಿಗೆ :

ಭಾಸ್ಕರ್ ಪ್ರಕಟನಾಲಯ
E-100, ಸುಬೇದಾರ್ ಛತ್ರಂ ರಸ್ತೆ
ಬೆಂಗಳೂರು-೯

ಬೆಲೆ ೩ ರೂಪಾಯಿ

Edited and Published by M. Shivaram
Printed by B. S. Iyengar, Bangalore-2